ಸತ್ಯ ವಿಶ್ವಾಸ

ಭಾಗ - 4

ಆರನೇ ತರಗತಿ

ಲೇಖಕರು : ಎ. ಎ. ಕಬೀರ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಮುನ್ನುಡಿ

ಧಾರ್ಮಿಕ ಶಿಕ್ಷಣವು ಮಾನವ ಸಮಾಜಕ್ಕೆ ಮಾರ್ಗದರ್ಶಕವಾಗಿರಬೇಕು. ಹಾಗಾದರೆ ನಾಗರಿಕತೆಯ ಉದಾತ್ತ ಮೌಲ್ಯಗಳನ್ನು ಸಾಕ್ಷಾತ್ಕರಿಸಿ ಜೀವನವನ್ನು ಸಫಲಗೊಳಿಸಲು ಮಾನವನಿಗೆ ಸಾಧ್ಯವಾಗುತ್ತದೆ. ಈ ವಾಸ್ತವಿಕತೆಯನ್ನು ಮರೆತರೆ ಅಥವಾ ನಿರ್ಲಕ್ಷಿಸಿದರೆ ಮಾನವೀಯ ನಾಗರಿಕತೆಯು ವಿಫಲವಾಗುತ್ತದೆ. ದುರಂತಮಯ ಪರಿಣಾಮಗಳಿಂದ ಸುರಕ್ಷಿತರಾಗಿರಲಿಕ್ಕಾಗಿ, ಧಾರ್ಮಿಕ ಮೌಲ್ಯಗಳನ್ನು ಪಾಲಿಸಬೇಕಾದುದು ಕ್ರಿಯಾಶೀಲ ಸಮಾಜದ ಹೊಣೆಯಾಗಿದೆ. ಅದು ಬಹುದೊಡ್ಡ ಮಾನವೀಯ ಸೇವೆಯೂ ಹೌದು.

ಧಾರ್ಮಿಕ ಶಿಕ್ಷಣದಲ್ಲಿ ಸತ್ಯವಿಶ್ವಾಸಕ್ಕೆ ಪ್ರಮುಖ ಸ್ಥಾನವಿದೆ. ವಸ್ತುತಃ ಸತ್ಯವಿಶ್ವಾಸದ ಪಾಠಗಳೇ ಧಾರ್ಮಿಕ ಶಿಕ್ಷಣದ ಆತ್ಮವಾಗಿದೆ. ಆದ್ದರಿಂದ ಧಾರ್ಮಿಕ ಶಿಕ್ಷಣದ ಆರಂಭದಿಂದಲೇ ಅವುಗಳ ಸರಿಯಾದ ಬೋಧನೆಯ ಅಗತ್ಯವಿದೆ.

ಹಿಂದಿನ ತರಗತಿಗಳ ಪಾಠ ಪುಸ್ತಕಗಳಲ್ಲಿ ವಿಶ್ವಾಸ ಕಾರ್ಯಗಳು ಮತ್ತು ಕೆಲವು ಉಪವಿಷಯಗಳ ಪ್ರಾಥಮಿಕ ಪಾಠಗಳನ್ನು ಸೇರಿಸಲಾಗಿತ್ತು. 'ಸತ್ಯವಿಶ್ವಾಸ ಪಾಠಗಳ' ನಾಲ್ಕನೇ ಭಾಗವಾಗಿರುವ ಈ ಪುಸ್ತಕದಲ್ಲಿ ಇಸ್ಲಾಮ್, ಕುಫ್ರ್, ಈಮಾನ್, ತೌಹೀದ್ ಎಂಬೀ ವಿಷಯಗಳನ್ನು ಸ್ವಲ್ಪ ವಿವರವಾಗಿ ನೀಡಲಾಗಿದೆ.

ಕೇವಲ ಉರು ಹೊಡೆದು ಕಂಠಪಾಠ ಮಾಡುವುದರಿಂದ ವಿಶ್ವಾಸದ ಸಂಪೂರ್ಣ ಫಲ ದೊರೆಯುವುದಿಲ್ಲ. ವಿಶ್ವಾಸದ ಸ್ಫೂರ್ತಿಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಲು ಅಧ್ಯಾಪಕರು ಪ್ರಯತ್ನಿಸಬೇಕು.

ಪಾಠದ ಕೊನೆಯಲ್ಲಿ ಮಾದರಿ ಪ್ರಶ್ನೆಗಳನ್ನು ಕೊಡಲಾಗಿದೆ. ಪ್ರತಿಯೊಂದು ಪಾಠಕ್ಕೆ ಅಗತ್ಯವಿರುವ ಹೆಚ್ಚಿನ ಪ್ರಶ್ನೆಗಳನ್ನು ಅಧ್ಯಾಪಕರೇ ರಚಿಸಬೇಕು. ಪಾಠಗಳನ್ನು ಸುಲಭವಾಗಿ ಕಲಿಯಲಿಕ್ಕಾಗಿ ಭಾಷೆಯನ್ನು ಆದಷ್ಟು ಸರಳಗೊಳಿಸಲು ಪ್ರಯತ್ನಿಸಲಾಗಿದೆ. ಆದರೂ ಲೋಪದೋಷಗಳಿರಬಹುದು. ಸಹೃದಯರ ಸಲಹೆ ಸೂಚನೆಗಳನ್ನು ನಿರೀಕ್ಷಿಸುತ್ತೇವೆ.

ಪ್ರಕಾಶಕರು

ಅನುಕ್ರಮಣಿಕೆ

——*——

ಪಾಠ 1

ಇಸ್ಲಾಮ್

ನಾವೆಲ್ಲರೂ ಮುಸ್ಲಿಮರು. ನೀವು ಯಾರು? ಎಂಬ ಪ್ರಶ್ನೆಗೆ 'ನಾವು ಮುಸ್ಲಿಮರು' ಎಂಬ ಉತ್ತರವನ್ನೇ ನೀಡುತ್ತೀರಿ. ಯಾಕೆ ಮುಸ್ಲಿಮರಾಗಿದ್ದೀರಿ? ಎಂದು ಪ್ರಶ್ನಿಸಿದರೆ ನಿಮ್ಮ ಉತ್ತರವೇನು? ನಿಮ್ಮ ಹೆಸರು ಮುಹಮ್ಮದ್, ಅಬ್ದುಲ್ ರಹಿಮಾನ್ ಅಥವಾ ಅಂತಹ ಬೇರೆ ಅರಬಿ ಹೆಸರಿರುವುದರಿಂದಲೋ? ಮುಸ್ಲಿಮರಾದ ತಂದೆತಾಯಿಗಳ ಮಕ್ಕಳಾಗಿ ಹುಟ್ಟಿರುವುದರಿಂದಲೋ? ಕೇವಲ ಮುಸ್ಲಿಮ್ ಕುಟುಂಬದಲ್ಲಿ ಜನಿಸಿರುವುದರಿಂದ ಒಬ್ಬರು ಮುಸ್ಲಿಮನೆಂದು ಹೇಳಬಹುದೇ? ಒಬ್ಬನ ಹೆಸರು ಮುಹಮ್ಮದ್, ಇನ್ನೊಬ್ಬನ ಹೆಸರು ಮಾಧವ ಎಂಬ ಮಾತ್ರಕ್ಕೆ ಮೊದಲಿನ ವ್ಯಕ್ತಿಗೆ ಅಲ್ಲಾಹನು ಪರಲೋಕದಲ್ಲಿ ಸ್ವರ್ಗವನ್ನೂ ಎರಡನೆಯವನಿಗೆ ನರಕವನ್ನೂ ನೀಡುವನೋ? ಒಬ್ಬನ ತಂದೆ ತಾಯಂದಿರು ಮುಸ್ಲಿಮರು, ಇನ್ನೊಬ್ಬನ ತಂದೆ ತಾಯಂದಿರು ಬೇರೆಯಾದ ಕಾರಣದಿಂದ ಒಬ್ಬನಿಗೆ ಪರಲೋಕದಲ್ಲಿ ಪುರಸ್ಕಾರ ಮತ್ತೊಬ್ಬನಿಗೆ ಶಿಕ್ಷೆ ದೊರೆಯುವುದೆಂದು ಹೇಳಬಹುದೇ? ಹಾಗಿದ್ದರೆ, ಅದು ನ್ಯಾಯವೆಂದು ಬುದ್ಧಿಯಿರುವ ಯಾರೂ ಹೇಳಲಾರರು.

ಕಳೆದ ಪರೀಕ್ಷೆಯಲ್ಲಿ ನೀವು ಬರೆದ ಉತ್ತರಗಳಿಂದ ಪಡೆದ ಅಂಕಗಳ ಆಧಾರದಲ್ಲಿ ಅಧ್ಯಾಪಕರು ನಿಮ್ಮನ್ನು ಉತ್ತೀರ್ಣಗೊಳಿಸುತ್ತಾರೆ. ಆದರೆ ಉತ್ತರ ಪತ್ರಿಕೆಯ ಉತ್ತರಗಳನ್ನು ಪರಿಶೀಲಿಸದೆ ಅಧ್ಯಾಪಕರು ಕೆಲವು ವಿದ್ಯಾರ್ಥಿಗಳನ್ನು ಮಾತ್ರ ಉತ್ತೀರ್ಣಗೊಳಿಸಿ ಇತರರನ್ನು ಅನುತ್ತೀರ್ಣಗೊಳಿಸಿದರೆ ಆ ಅಧ್ಯಾಪಕರ ಬಗ್ಗೆ ನೀವು ಏನು ಭಾವಿಸುತ್ತೀರಿ? ಆ ಕ್ರಮ ಅನ್ಯಾಯವೆಂದು ನೀವು ಹೇಳುವಿರಿ. ಅಧ್ಯಾಪಕನಿಗೆ ಎಲ್ಲ ವಿದ್ಯಾರ್ಥಿಗಳೂ ಸಮಾನರು. ಅತಿ ಚೆನ್ನಾಗಿ ಕಲಿಯುವ

ವಿದ್ಯಾರ್ಥಿಗಳನ್ನು ಅಧ್ಯಾಪಕರು ಹೆಚ್ಚು ಮೆಚ್ಚುತ್ತಾರೆ. ಪರೀಕ್ಷೆಯಲ್ಲಿ ಸರಿಯಾದ ಉತ್ತರಗಳನ್ನು ಬರೆದವರಿಗೆ ಅತೀ ಹೆಚ್ಚು ಅಂಕಗಳನ್ನು ನೀಡುತ್ತಾರೆ. ಹೀಗಿರುತ್ತಾ, ಸೃಷ್ಟಿಗಳಲ್ಲಿ ಒಂದು ನಿರ್ದಿಷ್ಟ ವರ್ಗದಲ್ಲಿ ಹುಟ್ಟಿದವರಿಗೆ ಸ್ವರ್ಗ ನೀಡಿ,ಇತರರಿಗೆ ಕರುಣಾಸಾಗರ ಮತ್ತು ನ್ಯಾಯ ಪಾಲಕನಾದ ಅಲ್ಲಾಹನು ಅದನ್ನು ನಿಷೇಧಿಸುವನೆಂದು ನಾವು ಭಾವಿಸಬಹುದೆ? ಖಂಡಿತ ಸಾಧ್ಯವಿಲ್ಲ. ಹಾಗಿದ್ದರೆ ಮುಸ್ಲಿಮನಾಗುವುದು ಎಂದರೇನು?

ಇಸ್ಲಾಮೀ ವಿಶ್ವಾಸವನ್ನು ಬೆಳೆಸಿ ಆ ಪ್ರಕಾರ ಬಾಳುವವರನ್ನು ಮುಸ್ಲಿಮರೆಂದು ಸಾಮಾನ್ಯವಾಗಿ ಹೇಳಬಹುದು. ಹಾಗಾದರೆ, ಇಸ್ಲಾಮ್ ಎಂದರೇನು? ಎಂಬುದನ್ನು ತಿಳಿಯದೆ ಯಾರಿಗೂ ನೈಜ ಮುಸ್ಲಿಮನಾಗಿ ಬಾಳಲು ಸಾಧ್ಯವಿಲ್ಲ. ಈ ತಿಳುವಳಿಕೆಯು ಬಹಳ ಪ್ರಾಮುಖ್ಯವಾಗಿದೆ. ಏಕೆಂದರೆ, ಕೇವಲ ಮುಸ್ಲಿಮನೆಂದು ವಾದಿಸುವುದರಿಂದ ಅಥವಾ ಮುಸ್ಲಿಮ್ ತಂದೆ ತಾಯಂದಿರ ಮಕ್ಕಳಾಗಿ ಹುಟ್ಟುವುದರಿಂದ ಒಬ್ಬರಿಗೆ ಸ್ವರ್ಗ ದೊರೆಯಲು ಅಥವಾ ನರಕ ಶಿಕ್ಷೆಯಿಂದ ಪಾರಾಗಲು ಸಾಧ್ಯವಿಲ್ಲ. ಅದಕ್ಕೆ ಈ ಲೋಕದಲ್ಲಿ ಇಸ್ಲಾಮೀ ನಿಯಮಗಳನ್ನು, ವಿಧಿ-ನಿಷೇಧಗಳನ್ನು ಪಾಲಿಸಿಯೇ ಬಾಳಬೇಕು. ಆದ್ದರಿಂದ ಇಸ್ಲಾಮ್‌ನ ಬಗ್ಗೆ ಚೆನ್ನಾಗಿ ತಿಳಿದಿರಬೇಕಾದುದು ಅನಿವಾರ್ಯವಾಗಿದೆ.

ಇಸ್ಲಾಮ್ ಎಂದರೇನು?

(اسلام) ಇಸ್ಲಾಮ್ ಎಂಬ ಅರಬೀ ಪದವು (س ل م) 'ಸಲಮ' ಎಂಬ ಮೂಲ ಪದದಿಂದ ಬಂದಿದೆ. ಆ ಪದಕ್ಕೆ ಅನುಸರಣೆ, ಅರ್ಪಣೆ ಮತ್ತು ಶಾಂತಿ ಎಂಬ ಅರ್ಥವಿದೆ. ಅಲ್ಲಾಹನಿಗೆ ಸರ್ವಸ್ವವನ್ನೂ ಅರ್ಪಿಸಿ ಆತನ ನಿಯಮಗಳನ್ನು ಮಾತ್ರ ಪಾಲಿಸಿ ಬಾಳಬೇಕು. ಅದೇ ಇಸ್ಲಾಮ್. ಅಂತಹ ಜೀವನದಿಂದ ಮಾತ್ರ ಶಾಂತಿ ನೆಮ್ಮದಿಗಳು ಸಾಧ್ಯ.

ಈ ಪ್ರಪಂಚ ಮತ್ತು ಅದರಲ್ಲಿರುವ ಸಕಲ ಚರಾಚರಗಳನ್ನು ಸೃಷ್ಟಿಸಿದ ಅಲ್ಲಾಹನು ಅದರ ಅಸ್ತಿತ್ವ ಮತ್ತು ಚಲನೆಗಾಗಿ ಕೆಲವು ನಿಯಮಗಳನ್ನೂ ನಿರ್ಧರಿಸಿದ್ದಾನೆ. ಆ ನಿಯಮದನ್ವಯ ಪ್ರತಿಯೊಂದು ಅಣುವೂ ಚಲಿಸುತ್ತದೆ. ಪ್ರಪಂಚದ ಯಾವೊಂದು ಘಟಕವೂ ಆ ನಿಯಮವನ್ನು ಉಲ್ಲಂಘಿಸಲಾರದು. ಎಲ್ಲವೂ ಅಲ್ಲಾಹನ ಆಜ್ಞಾನುಸಾರ ಚಲಿಸುತ್ತವೆ. ಆ ನಿಯಮಗಳ ಬಲದಿಂದಲೇ ಪ್ರಪಂಚವು ನೆಲೆ ನಿಂತಿದೆ. ಅಲ್ಲಾಹನು ನಿರ್ಣಯಿಸಿದ ನಿಯಮ ವ್ಯವಸ್ಥೆಯಿಂದ ಸ್ವಲ್ಪವಾದರೂ ವ್ಯತಿಚಲಿಸಿದರೆ ಪ್ರಪಂಚವೇ ಅಡಿಮೇಲಾಗಿ ನಾಶವಾದೀತು. ಅಲ್ಲಾಹನು ತನ್ನ ನಿರ್ಣಯವನ್ನು ಬದಲಿಸದಿರುವ ತನಕ ಪ್ರಪಂಚವು ಅದರ ನಿರ್ಣಿತ ನಿಯಮದನ್ವಯ ಚಲಿಸುತ್ತಲಿರುವುದು.

ನಮ್ಮ ಸುತ್ತಲಿನ ಪ್ರಪಂಚವನ್ನೊಮ್ಮೆ ನಾವು ಅವಲೋಕಿಸೋಣ. ಬೆಳಗಾತ ನಿದ್ದೆಯಿಂದ ಎದ್ದಾಗ ಪೂರ್ವ ದಿಗಂತದಲ್ಲಿ ಸೂರ್ಯವು ಉದಯಿಸುತ್ತಿರುತ್ತದೆ. ಸಂಧ್ಯಾ ಕಾಲದಲ್ಲಿ ಅದು ಪಶ್ಚಿಮ ದಿಗಂತದಲ್ಲಿ ಅಸ್ತಮಿಸುತ್ತದೆ. ಇದು ನಾವು ನಿತ್ಯ ನೋಡುವ ದೃಶ್ಯ. ನಿನ್ನೆ, ಇಂದು ಮತ್ತು ಎಂದೆಂದೂ ಹೀಗೆಯೇ ಜರಗುತ್ತಿರುತ್ತದೆ. ಸೂರ್ಯವು ಒಮ್ಮೆಯೂ ಪಶ್ಚಿಮದಲ್ಲಿ ಉದಿಸಿ ಪೂರ್ವದಲ್ಲಿ ಅಸ್ತಮಿಸುವುದಿಲ್ಲ. ಹಾಗೆಯೇ ಚಂದ್ರವು ಮೊದಲು ಬಾಗಿದ ಸಣ್ಣ ಬೆಳ್ಳಿ ರೇಖೆಯಂತೆ ಕಾಣಿಸಿ ಕೊಳ್ಳುತ್ತದೆ. ದಿನಂಪ್ರತಿ ವೃದ್ಧಿಸುತ್ತಾ 14 ನೇಯ ದಿನ ದೊಡ್ಡ ಬಟ್ಟಲಿನಂತೆ ನಮಗೆ ಕಾಣಿಸುತ್ತದೆ. ಇದು ಸದಾ ಪುನರಾವರ್ತಿಸುತ್ತಿರುವ ಕ್ರಿಯೆಯಾಗಿದೆ. ಇದು ಸೂರ್ಯ ಮತ್ತು ಚಂದ್ರಗಳಿಗೆ ಅಲ್ಲಾಹನು ನಿರ್ಣಯಿಸಿದ ವ್ಯವಸ್ಥೆ. ಆ ಕ್ರಮವನ್ನು ಅವು ಎಂದೂ ತಪ್ಪಿ ನಡೆಯುವುದಿಲ್ಲ. ಅನೇಕ ಸಹಸ್ರ ಮೈಲು ದೂರದಲ್ಲಿರುವುದರಿಂದ ಅತಿ ಚಿಕ್ಕದಾಗಿ ಗೋಚರಿಸುವ ಕೋಟಿಗಟ್ಟಲೆ ನಕ್ಷತ್ರಗಳು ಅಲ್ಲಾಹನು ನಿರ್ಣಯಿಸಿದ ಕ್ರಮದಂತೆಯೇ ಚಲಿಸುತ್ತವೆ. ನಮ್ಮ ಭೂಮಿಗಿಂತ ಅನೇಕ ಪಟ್ಟು ವಿಶಾಲವಾಗಿರುವ ಆ ಮಹಾ ಗೋಳಗಳು ಅಲ್ಲಾಹನ ವ್ಯವಸ್ಥೆಯಿಂದ

ಸ್ವಲ್ಪ ತಪ್ಪಿದರೆ ಇಡೀ ವಿಶ್ವವೇ ಧೂಳೀಪಟವಾಗುವುದು. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ಮಳೆಗಾಲ ಆರಂಭವಾಗುತ್ತದೆ. ಹೀಗೆ ಹವಾಮಾನ, ಉದಯಾಸ್ತಮಾನ ಇತ್ಯಾದಿ ಪ್ರಕ್ರಿಯೆಗಳು ಅಲ್ಲಾಹನ ವ್ಯವಸ್ಥೆಯನುಸಾರ ಜರಗುತ್ತವೆ. ಅವುಗಳಿಗೆ ಅಲ್ಲಾಹನ ನಿಯಮಗಳನ್ನು ಉಲ್ಲಂಘಿಸಲು ಸಾಧ್ಯವಿಲ್ಲ. ಆ ವ್ಯವಸ್ಥೆಯಿರುವುದರಿಂದಲೇ ಪ್ರಪಂಚವು ನೆಲೆನಿಂತಿದೆ. ಅಲ್ಲಾಹನ ವ್ಯವಸ್ಥೆಯನ್ನು ಅನುಸರಿಸುತ್ತಿರುವುದರಿಂದ ಪ್ರಪಂಚ ಮತ್ತು ಅದರ ಎಲ್ಲ ವಸ್ತುಗಳನ್ನೂ 'ಮುಸ್ಲಿಮರು' ಎಂದು ಹೇಳಬಹುದು. ಆ ಅರ್ಥದಲ್ಲಿ ಪ್ರಪಂಚದ ಧರ್ಮವೂ 'ಇಸ್ಲಾಮ್' ಆಗಿದೆ. ಅದನ್ನು 'ಅಲ್ ಇಸ್ಲಾಮುತ್ತಕ್ವೀನಿ' ಅಥವಾ 'ನೈಸರ್ಗಿಕ ಇಸ್ಲಾಮ್' ಎಂದು ಹೇಳಬಹುದು.

ಪ್ರಪಂಚದ ಒಂದು ಘಟಕವಾಗಿರುವ ಮಾನವನು ಒಂದೆಡೆ ಇದೇ ನೈಸರ್ಗಿಕ ಇಸ್ಲಾಮಿಗೆ ವಿಧೇಯನಾಗಿದ್ದಾನೆ. ಆತನ ಜನನ ಮತ್ತು ಬೆಳವಣಿಗೆಯೆಲ್ಲವೂ ಒಂದು ನಿರ್ದಿಷ್ಟ ವ್ಯವಸ್ಥೆಯಂತೆ ನಡೆಯುತ್ತದೆ. ಅದನ್ನು ಉಲ್ಲಂಘಿಸಲು ಆತನಿಗೆ ಸಾಧ್ಯವಿಲ್ಲ. ಪ್ರಾಣ ಉಳಿಯಬೇಕಿದ್ದರೆ ಉಸಿರಾಡಲು ಗಾಳಿಬೇಕು. ತಿನ್ನಲು ಬಾಯಿ, ಮಾತನಾಡಲಿಕ್ಕಾಗಿ ನಾಲಗೆ, ನೋಡಲಿಕ್ಕಾಗಿ ಕಣ್ಣು, ಆಲಿಸಲಿಕ್ಕಾಗಿ ಕಿವಿ, ವಾಸನೆ ತಿಳಿಯಲಿಕ್ಕಾಗಿ ಮೂಗು, ಆಲೋಚಿಸಲಿಕ್ಕಾಗಿ ಮೆದುಳು ಇತ್ಯಾದಿಗಳನ್ನು ಅಲ್ಲಾಹನೇ ಆತನಿಗೆ ನೀಡಿದ್ದಾನೆ. ಈ ಎಲ್ಲ ಅಂಗಾಂಗಗಳೂ ಅಲ್ಲಾಹನು ನಿರ್ಣಯಿಸಿದ ನಿಯಮದಂತೆಯೇ ವರ್ತಿಸುತ್ತವೆ. ಕಿವಿಯಿಂದ ನೋಡಲು ಅಥವಾ ಮೂಗಿನಿಂದ ಆಲಿಸಲು ಮಾನವನಿಗೆ ಸಾಧ್ಯವಿಲ್ಲ. ಆದರೆ, ಮಾನವ ಮತ್ತು ಪ್ರಪಂಚದ ಇತರ ವಸ್ತುಗಳ ನಡುವೆ ಒಂದು ವ್ಯತ್ಯಾಸವಿದೆ. ಮಾನವನಿಗೆ ವಿಷಯಗಳನ್ನು ಪ್ರತ್ಯೇಕಿಸಿ ತಿಳಿಯುವ ಬುದ್ಧಿ ಶಕ್ತಿಯಿದೆ. ಇದು ಬೇರೆ ಯಾವ ಜೀವಿಗೂ ಇಲ್ಲದಂತಹ ವೈಶಿಷ್ಟ್ಯವಾಗಿದೆ. ಅಲ್ಲಾಹನು ಅನುಗ್ರಹಿಸುವ ಈ ಸಾಮರ್ಥ್ಯದಿಂದ ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂದು ಗುರುತಿಸಲು ಆತನಿಗೆ ಸಾಧ್ಯವಾಗುತ್ತದೆ.

ಆತನಿಗೆ ಯಾವುದಾದರೂ ವಿಷಯವನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸ್ವಾತಂತ್ರ್ಯವಿದೆ. ಈ ಸ್ವಾತಂತ್ರ್ಯವನ್ನು ಬಳಸಿಯೇ ಆತನು ಇಲ್ಲಿ ಬಾಳುತ್ತಾನೆ. ಅದರೊಂದಿಗೆ ಇಲ್ಲಿ ಇನ್ನೊಂದು ವಿಷಯವನ್ನೂ ಗಮನಿಸಬೇಕು. ಮಾನವ ಮತ್ತು ಈ ಪ್ರಪಂಚಕ್ಕೆ ಒಂದು ನಿಯಮ ವ್ಯವಸ್ಥೆಯನ್ನು ನೀಡಿರುವಂತೆಯೇ ಮಾನವನ ಜೀವನಕ್ಕೆ ಇನ್ನೊಂದು ನಿಯಮ ವ್ಯವಸ್ಥೆಯನ್ನು ಅಲ್ಲಾಹನು ನೀಡಿದ್ದಾನೆ. ಮಾನವನಿಗೆ ನೀಡಲಾದ ಈ ವಿಶೇಷ ವ್ಯವಸ್ಥೆಯನ್ನು 'ಅಲ್-ಇಸ್ಲಾಮುತ್ತಶ್ರೀಇ' ಅಥವಾ ಮಾನವನು ವಿಶ್ವಾಸ ಕರ್ಮಗಳಲ್ಲಿ ಪಾಲಿಸಬೇಕಾಗಿರುವ ಇಸ್ಲಾಮ್ ಎಂದು ಹೇಳಲಾಗುತ್ತದೆ. 'ದೀನುಲ್ ಇಸ್ಲಾಮ್' ಎಂಬುದರ ತಾತ್ಪರ್ಯವೂ ಅದೇ ಆಗಿದೆ.

ನಾವು ಬದುಕುವ ಭೂಮಿ ಮತ್ತು ಆಕಾಶ ಲೋಕವು ಅಲ್ಲಾಹನ ನಿಯಮ ವ್ಯವಸ್ಥೆಯನ್ನು ಪಾಲಿಸಿ ಚಲಿಸುತ್ತಿರುವುದೇ ಅವು ಸುಭದ್ರ ಮತ್ತು ಪ್ರಶಾಂತವಾಗಿರುವುದಕ್ಕೆ ಕಾರಣವೆಂದು ಈ ಹಿಂದೆ ಹೇಳಲಾಗಿದೆ. ಹಾಗೆಯೇ ಮಾನವ ಸಮೂಹದಲ್ಲಿಯೂ ಶಾಂತಿ ನೆಲೆಸ ಬೇಕಿದ್ದರೆ ಅಲ್ಲಾಹನ ದೀನ್ ಅರ್ಥಾತ್ 'ಇಸ್ಲಾಮ್' ಪ್ರಕಾರ ಅವರು ಬಾಳಬೇಕೆಂದು ವ್ಯಕ್ತವಾಗುತ್ತದೆ. ಪ್ರಪಂಚದ ಎಲ್ಲ ವಸ್ತುಗಳು ಅಲ್ಲಾಹನಿಗೆ ವಿಧೇಯವಾಗುವಾಗ ಅಲ್ಲಾಹನ ಸೃಷ್ಟಿಯೇ ಆಗಿರುವ ಮಾನವನು ತನ್ನಿಷ್ಟದಂತೆ ವರ್ತಿಸುವುದು ಮಹಾ ಪಾತಕವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಅಲ್ಲಾಹನು ಕುರ್‌ಆನ್‌ನಲ್ಲಿ ಅದನ್ನೇ ಪ್ರಶ್ನಿಸಿದ್ದಾನೆ-

أَفَغَيْرَ دِينِ اللَّهِ يَبْغُونَ وَلَهُ أَسْلَمَ مَنْ فِي
السَّمٰوَاتِ وَالْأَرْضِ طَوْعًا وَكَرْهًا وَإِلَيْهِ
يُرْجَعُونَ (٣:٨٣)

"ಇವರೇನು ಅಲ್ಲಾಹನ ಅನುಸರಣಾ ರೀತಿಯನ್ನು(ಧರ್ಮ) ತ್ಯಜಿಸಿ ಬೇರೆ

ಯಾವುದಾದರೂ ರೀತಿಯನ್ನನುಸರಿಸಲು ಇಷ್ಟ ಪಡುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳೂ ಬಯಸಿಯೋ ಬಯಸದೆಯೋ ಅಲ್ಲಾಹನ ಆಜ್ಞಾಪಾಲಕಗಳಾಗಿ (ಮುಸ್ಲಿಮ್‌ಗಳಾಗಿ)ಯೇ ಇವೆ ಮತ್ತು ಸರ್ವರಿಗೂ ಅವನ ಕಡೆಗೇ ಮರಳಲಿಕ್ಕಿದೆ." (3:83)

ಅಲ್ಲಾಹನು ಮಾನವನನ್ನು ಸೃಷ್ಟಿಸಿ ಭೂಮಿಗೆ ವೃಥಾ ಕಳುಹಿಸಿಲ್ಲ. ಮಾನವನನ್ನು ಅಲ್ಲಾಹನ ಖಲೀಫ ಅಥವಾ ಪ್ರತಿನಿಧಿಯಾಗಿ ಭೂಮಿಗೆ ಕಳುಹಿಸಲಾಗಿದೆ. ಅದು ಎಂತಹ ಉನ್ನತ ಸ್ಥಾನವೆಂದು ಆಲೋಚಿಸಿ ನೋಡಿರಿ. ಓರ್ವ ಆಡಳಿತಗಾರನು ಒಬ್ಬನನ್ನು ತನ್ನ ದೇಶದ ವಿಶೇಷ ಪ್ರತಿನಿಧಿಯಾಗಿ ನೇಮಿಸುತ್ತಾನೆ. ಅದನ್ನು ಆತನು ಅತಿದೊಡ್ಡ ಗೌರವವೆಂದು ಭಾವಿಸುವುದಿಲ್ಲವೇ! ಹಾಗೆಯೇ ಅಲ್ಲಾಹನ ಭೂಮಿಯಲ್ಲಿ ಮಾನವನಿಗೆ ಅಂತಹ ಗೌರವದ ಸ್ಥಾನ ನೀಡಲಾಗಿದೆ. ತನ್ನನ್ನು ನೇಮಿಸಿದ ಆಡಳಿತಗಾರನ ಆಜ್ಞೆಗಳನ್ನು ಪಾಲಿಸಿ ಈಡೇರಿಸುವುದು ಪ್ರತಿನಿಧಿಯ ಕರ್ತವ್ಯ. ಆ ಆಜ್ಞೆಯ ವಿರುದ್ಧ ವರ್ತಿಸುವುದನ್ನು ಘೋರ ಅಪರಾಧವೆಂದು ಪರಿಗಣಿಸಲಾಗುತ್ತದೆ. ಹಾಗೆಯೇ ಕೃತಘ್ನತೆ ಮತ್ತು ಧಿಕ್ಕಾರದಿಂದ ವರ್ತಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಗುತ್ತದೆ.

ಹಾಗಾದರೆ ಅಲ್ಲಾಹನ ಆಜ್ಞೆಗಳನ್ನು ಪಾಲಿಸಿ ಕಾರ್ಯಗತಗೊಳಿಸಬೇಕಾದುದು ಭೂಮಿಯಲ್ಲಿ ಆತನ ಪ್ರತಿನಿಧಿಯಾಗಿರುವ ಮಾನವನ ಕರ್ತವ್ಯವೆಂಬುದು ವ್ಯಕ್ತ. ಅಲ್ಲಾಹನ ಇಷ್ಟಾನಿಷ್ಟಗಳಂತೆ ಭೂಮಿಯಲ್ಲಿ ಬಾಳಬೇಕು- ಆದ್ದರಿಂದ ಅಲ್ಲಾಹನ ಇಷ್ಟಾನಿಷ್ಟ ಮತ್ತು ವಿಧಿ- ನಿಷೇಧಗಳೇನೆಂದು ನಾವು ತಿಳಿದಿರಬೇಕು. ಮಾನವನು ಅವುಗಳನ್ನು ಸ್ವಂತ ಬುದ್ಧಿಯಿಂದ ಕಂಡುಹಿಡಿಯಲೆಂದು ಅಲ್ಲಾಹನು ನಿಶ್ಚಯಿಸಿಲ್ಲ. ಮಾನವನ ಬುದ್ಧಿ ಮತ್ತು ತಿಳುವಳಿಕೆಗಳಿಗೆ ಮಿತಿಯಿದೆ. ಎಲ್ಲ ವಿಷಯಗಳನ್ನೂ ಆತನಿಗೆ ಸ್ವಯಂ ಕಂಡುಹಿಡಿಯಲು ಸಾಧ್ಯವಿಲ್ಲ. ಆದ್ದರಿಂದ, ಮಾನವನಿಗೆ ಇಲ್ಲಿ ಸುಖವಾಗಿ ಬಾಳುವ ಎಲ್ಲ ಲೌಕಿಕ ವಸ್ತುಗಳನ್ನು ಸಜ್ಜುಗೊಳಿಸಿರುವ ಕರುಣಾಸಾಗರನಾದ ಆತನ ಸೃಷ್ಟಿಕರ್ತನೇ ತನ್ನ ನಿಯಮ ಮತ್ತು ಇಷ್ಟಾನಿಷ್ಟಗಳನ್ನು ಆತನಿಗೆ ಸ್ಪಷ್ಟಪಡಿಸಿದ್ದಾನೆ.

ನಮ್ಮೆಲ್ಲರ ಪಿತಾಮಹ ಮತ್ತು ಆದಿಮಾನವರಾದ ಪ್ರವಾದಿ ಆದಮ್(ಅ) ರಿಂದಲೇ ಈ ಕ್ರಮವನ್ನು ಅಲ್ಲಾಹನು ಆರಂಭಿಸಿದ್ದಾನೆ. ತರುವಾಯ ಮಾನವ ವರ್ಗವು ಆ ನಿಯಮಗಳನ್ನು ಮರೆತಾಗ ಅಥವಾ ಅದರಿಂದ ವ್ಯತಿಚಲಿಸಿದಾಗ ಪ್ರವಾದಿಗಳನ್ನು ಕಳುಹಿಸಿ ಅಲ್ಲಾಹನು ಅದನ್ನು ಪುನಃ ನೆನಪು ಮಾಡಿಸಿದನು. ಜಗತ್ತಿನ ನಾನಾ ಭಾಗಗಳಲ್ಲಿ ಅಲ್ಲಾಹನ ಸಂದೇಶವಾಹಕರು ಆಗಮಿಸಿದ್ದರು. ಅವರ ಸಂಖ್ಯೆ ಒಂದು ಲಕ್ಷಕ್ಕೂ ಅಧಿಕವಿದೆ. ಕೊನೆಗೆ ಪ್ರವಾದಿ ಮುಹಮ್ಮದ್‌ರ(ಸ) ಮೂಲಕ ತನ್ನ ನಿಯಮ ವ್ಯವಸ್ಥೆಯ ಪೂರ್ಣ ರೂಪವನ್ನು ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ಸಮಸ್ತ ಮಾನವರಿಗಾಗಿ ನೀಡಿದನು. ಮುಹಮ್ಮದ್(ಸ) ಅವರು ಅಂತ್ಯ ಪ್ರವಾದಿಯಾಗಿದ್ದಾರೆ. ಪ್ರವಾದಿಯವರ(ಸ) ಬಳಿಕ ಇನ್ನು ಯಾವ ಪ್ರವಾದಿಯೂ ಆಗಮಿಸಲಿಕ್ಕಿಲ್ಲ. ಪ್ರವಾದಿಯವರ(ಸ) ಮೂಲಕ ಅವತೀರ್ಣಗೊಂಡ ಪವಿತ್ರ ಕುರ್‌ಆನ್ ಯಾವುದೇ ಬದಲಾವಣೆಯಿಲ್ಲದೇ ಇಂದಿಗೂ ಉಳಿದಿದೆ. ಲೋಕಾಂತ್ಯದ ತನಕ ಅದು ಉಳಿಯುವುದು. ಏಕೆಂದರೆ ಅದರ ಸಂರಕ್ಷಣೆಯನ್ನು ಅಲ್ಲಾಹನೇ ಸ್ವಯಂ ವಹಿಸಿಕೊಂಡಿದ್ದಾನೆ. ಇನ್ನು ಜಗತ್ತಿನಲ್ಲಿರುವ ಎಲ್ಲ ಮಾನವರೂ ಪ್ರವಾದಿ ಪರಂಪರೆಯಲ್ಲಿ ಕೊನೆಯವರಾಗಿರುವ ಮುಹಮ್ಮದ್‌ರ(ಸ) ಮೂಲಕ ದೊರೆತ ಅಲ್ಲಾಹನ ಸಮಗ್ರ ವ್ಯವಸ್ಥೆಯನ್ನು ಪಾಲಿಸಬೇಕು. ಅದುವೇ 'ಇಸ್ಲಾಮ್'.

ಮೇಲಿನ ವಿವರಣೆಗಳಿಂದ ಇಸ್ಲಾಮ್ ಎಂದರೆ ಪ್ರವಾದಿ ಮುಹಮ್ಮದ್‌ರು(ಸ) ತಂದ ಹೊಸ ಧರ್ಮವಲ್ಲ, ಆದಿಮಾನವ ಆದಮ್‌ರಿಂದ(ಅ) ನೂಹ್, ಇಬ್ರಾಹೀಮ್, ಮೂಸಾ, ಈಸಾ(ಅ) ವರೆಗಿನ ಗತಪ್ರವಾದಿಗಳೆಲ್ಲರ ಧರ್ಮವು ಇಸ್ಲಾಮ್ ಆಗಿತ್ತೆಂದು ನೀವು ತಿಳಿದಿರಿ. ಅವರೆಲ್ಲರೂ ಮುಸ್ಲಿಮರಾಗಿದ್ದರು. ವಸ್ತುತಃ ಮಾನವನು ಈ ಧರ್ಮವನ್ನು ಅಂಗೀಕರಿಸಿದಾಗ ಸಂಪೂರ್ಣ ಮಾನವನಾಗುತ್ತಾನೆ. ಏಕೆಂದರೆ ಮಾನವ ಕುಟುಂಬದ ಪರಂಪರೆಯು ಪ್ರಥಮ ಮಾನವನ ಧರ್ಮವನ್ನು ಅವಲಂಬಿಸಿದೆ. ಕೆಲವರು ಇಸ್ಲಾಮನ್ನು ಮುಹಮ್ಮದೀಯ ಧರ್ಮವೆಂದೂ ಮುಸ್ಲಿಮರನ್ನು ಮುಹಮ್ಮದೀಯರೆಂದೂ ಪ್ರವಾದಿ ಮುಹಮ್ಮದ್‌ರನ್ನು ಇಸ್ಲಾಮ್ ಧರ್ಮ

ಸ್ಥಾಪಕನೆಂದೂ ಹೇಳುತ್ತಾರೆ. ಅದೆಲ್ಲವೂ ತಪ್ಪು. ಪ್ರವಾದಿ ಮುಹಮ್ಮದ್(ಸ) ಇಸ್ಲಾಮಿನ ಸ್ಥಾಪಕರಲ್ಲ, ಇಡೀ ಪ್ರಪಂಚ ಮತ್ತು ಸಕಲ ಮಾನವರನ್ನು ಸೃಷ್ಟಿಸಿರುವ ಅಲ್ಲಾಹನೇ ಅದರ ಸ್ಥಾಪಕ. ಕೇವಲ ಪ್ರವಾದಿ ಮುಹಮ್ಮದ್‌ರಲ್ಲಿ(ಸ) ಮಾತ್ರವಲ್ಲ, ಎಲ್ಲ ಪ್ರವಾದಿಗಳಲ್ಲಿ ವಿಶ್ವಾಸವಿರಿಸುವವರೇ ಮುಸ್ಲಿಮರು. ಪ್ರವಾದಿ ಮುಹಮ್ಮದ್‌ರಂತೆಯೇ(ಸ) ಯಹೂದಿಯರು ತಮ್ಮ ಪ್ರವಾದಿಯೆಂದು ಭಾವಿಸುವ ಮೂಸಾ(ಅ) ಮತ್ತು ಕ್ರೈಸ್ತರು ಏಸುಕ್ರಿಸ್ತರೆಂದು ಹೇಳುವ ಈಸಾ(ಅ) ಮುಂತಾದ ಎಲ್ಲರನ್ನೂ ಅಲ್ಲಾಹನ ಪ್ರವಾದಿಯೆಂದು ಮುಸ್ಲಿಮರು ನಂಬುತ್ತಾರೆ. ಅವರಲ್ಲಿ ಯಾರನ್ನಾದರೂ ನಿರಾಕರಿಸಿ ಕೇವಲ ಪ್ರವಾದಿ ಮುಹಮ್ಮದರಲ್ಲಿ(ಸ) ಮಾತ್ರ ವಿಶ್ವಾಸವಿರಿಸುವಾತನು ಮುಸ್ಲಿಮನಾಗುವುದಿಲ್ಲ. ಆದ್ದರಿಂದ ಮುಸ್ಲಿಮರನ್ನು ಮುಹಮ್ಮದೀಯರೆಂದು ಕರೆಯುವುದು ಅರ್ಥ ಹೀನವಾಗಿದೆ.

ಮಾದರಿ ಪ್ರಶ್ನೆಗಳು

1. 'ಇಸ್ಲಾಮ್' ಎಂಬ ಪದದ ಅರ್ಥವೇನು?
2. 'ಇಸ್ಲಾಮುತ್ತಕ್ವೀನಿ' ಮತ್ತು 'ಇಸ್ಲಾಮುತ್ತಶ್ರೀಈ' ಎಂದರೇನು? ಸಂಕ್ಷಿಪ್ತವಾಗಿ ವಿವರಿಸಿರಿ.
3. ಕೇವಲ ಮುಸ್ಲಿಮ್ ಕುಟುಂಬದಲ್ಲಿ ಹುಟ್ಟಿದರೆ ಓರ್ವರು ಮುಸ್ಲಿಮರಾಗುತ್ತಾರೆಯೇ?
4. 'ಇಸ್ಲಾಮ್ ಧರ್ಮ'ದ ಸ್ಥಾಪಕ ಯಾರು?

❋ ❋ ❋

ಪಾಠ 2

ಕುಫ್ರ್

'ಇಸ್ಲಾಮ್'ನ ವಿರೋಧ ಪದ 'ಕುಫ್ರ್' ಆಗಿದೆ. ಕುಫ್ರ್ ಎಂಬ ಅರಬಿ ಪದಕ್ಕೆ ನಿಷೇಧ, ಕೃತಘ್ನತೆ, ಅಡಗಿಸುವುದು ಇತ್ಯಾದಿ ಅರ್ಥಗಳಿವೆ. ಅಲ್ಲಾಹನಲ್ಲಿ ವಿಶ್ವಾಸವಿರಿಸಿ ಆತನ ನಿಯಮ ವ್ಯವಸ್ಥೆಯನ್ನು ಪಾಲಿಸುವವರನ್ನು ಮುಸ್ಲಿಮರೆನ್ನಲಾಗುತ್ತದೆಂದು ಹಿಂದಿನ ಪಾಠದಲ್ಲಿ ನೀವು ತಿಳಿದಿರುವಿರಿ. ಹಾಗೆಯೇ ಅಲ್ಲಾಹನನ್ನು ನಿರಾಕರಿಸಿ ಆತನ ಆಜ್ಞೆಗಳನ್ನು ಧಿಕ್ಕರಿಸಿ, ಆತನ ಅನುಗ್ರಹಗಳಿಗೆ ಕೃತಘ್ನತೆ ತೋರಿಸಿ ಅವುಗಳನ್ನು ಅಡಗಿಸುವವರನ್ನು 'ಕಾಫಿರರು' ಎನ್ನಲಾಗುತ್ತದೆ.

ಈ ಲೋಕದಲ್ಲಿ ಮಾನವನು ಅಲ್ಲಾಹನ ಅನುಗ್ರಹಗಳನ್ನು ಅನುಭವಿಸಿ ಬಾಳುತ್ತಾನೆ. ನಾವು ಹುಟ್ಟುವುದಕ್ಕಿಂತ ಮುಂಚೆಯೇ ಅಲ್ಲಾಹನು ಇಲ್ಲಿ ಸಜ್ಜುಗೊಳಿಸಿರುವ ಸೌಲಭ್ಯ ಮತ್ತು ಸಾಧನಾನುಕೂಲತೆಗಳಿಲ್ಲದಿದ್ದರೆ ಒಂದು ನಿಮಿಷವೂ ಇಲ್ಲಿ ಬದುಕಲು ನಮಗೆ ಸಾಧ್ಯವಿಲ್ಲ. ಒಮ್ಮೆ ಆಲೋಚಿಸಿ ನೋಡಿರಿ. ಮಾನವನು ಬದುಕಬೇಕಾದರೆ ಉಸಿರಾಡಬೇಕು. ಉಸಿರಾಡದೆ ನಾವು ಎಷ್ಟು ಕಾಲ ಬದುಕಬಹುದು. ಉಸಿರಾಡಲು ಬೇಕಾದ ಗಾಳಿಯನ್ನು ನಾವು ಸೃಷ್ಟಿಸಿದ್ದೇವೆಯೇ? ನಮಗೆ ಹಸಿವೆಯಾದಾಗ ಆಹಾರ ಬೇಕು. ಕೃಷಿ ಮಾಡಿ ಬೆಳೆಸುವ ಧಾನ್ಯಗಳೇ ನಮ್ಮ ಪ್ರಧಾನ ಆಹಾರವಾಗಿದೆ. ಆದರೆ ನಾವು ಬಿತ್ತಿದ ಬೀಜಗಳು ಚಿಗುರಬೇಕಾದರೆ ಮಳೆ, ಸೂರ್ಯನ ಶಾಖ ಮತ್ತು ಬೆಳಕಿನ ಅಗತ್ಯವಿದೆ. ಮಳೆಯನ್ನು ಸುರಿಸುವುದು ಯಾರು? ನಾವೋ? ಸೂರ್ಯನನ್ನು ಸೃಷ್ಟಿಸಿದ್ದು ಯಾರು? ಸೂರ್ಯ ತಾಪದಿಂದ ಸಮುದ್ರ ಜಲವು ನೀರಾವಿಯಾಗಿ ಮಾರ್ಪಡುತ್ತದೆ. ನೀರಾವಿಯಿಂದ ರೂಪುಗೊಂಡ ಕರಿಮೋಡಗಳು ಗಾಳಿಯಿಂದ ಚಲಿಸಿ ಮಳೆಯಾಗಿ ಸುರಿಯುತ್ತವೆ. ಈ ವ್ಯವಸ್ಥೆಯನ್ನು ನಾವು ಮಾಡಿದ್ದೇವೆಯೇ? ಜೀವನಕ್ಕೆ ಅತ್ಯವಶ್ಯಕವಾಗಿರುವ ಶುದ್ಧ ನೀರನ್ನು ನಾವು ಉಂಟು ಮಾಡಿದ್ದೇವೆಯೇ? ಸಮುದ್ರ ಜಲವನ್ನು ನಾವು ಸೃಷ್ಟಿಸಿದ್ದೇವೆಯೇ? ಅದರಲ್ಲಿ ಆಹಾರಕ್ಕಾಗಿ ಕೋಟ್ಯಾಂತರ ಮೀನುಗಳನ್ನು ನಾವು ಸೃಷ್ಟಿಸಿದ್ದೇವೆಯೇ?

ನಮಗೆ ಹಾಲು ಮತ್ತು ಮಾಂಸ ಒದಗಿಸುವ ಸಾಕು ಪ್ರಾಣಿಗಳನ್ನು ನಾವು ಸೃಷ್ಟಿಸಿದ್ದೇವೆಯೇ? ಇವು ಯಾವುದೂ ಮಾನವ ಸೃಷ್ಟಿಸಿದ್ದಲ್ಲ. ಅವೆಲ್ಲವನ್ನೂ ಅಲ್ಲಾಹ್ ಸೃಷ್ಟಿಸಿದ್ದಾನೆ. ಮಾನವನ ಉಪಯೋಗಕ್ಕಾಗಿ ಅವುಗಳನ್ನು ಸೃಷ್ಟಿಸಲಾಗಿದೆ. ಮಾನವನು ಹುಟ್ಟಿದಾಗ ಎಷ್ಟೊಂದು ದುರ್ಬಲ ಮತ್ತು ಅಸಹಾಯಕ! ಪುಟ್ಟ ಮಗುವಾಗಿರುವಾಗ ಅರಚುವ ವಿನಾ ಮಾನವನಿಗೆ ಸ್ವಯಂ ಏನನ್ನೂ ಮಾಡಲು ಸಾಧ್ಯವಿಲ್ಲ. ತಂದೆ ತಾಯಂದಿರ ಆರೈಕೆಯಿಂದ ಆತನು ಬೆಳೆಯುತ್ತಾನೆ. ತಾಯಿಯ ಮೊಲೆ ಹಾಲು ಮಕ್ಕಳ ಆಹಾರ. ತಾಯಿಯ ಗರ್ಭದಿಂದ ಆತ ಹುಟ್ಟುವಾಗ ಅಲ್ಲಾಹನು ಹಾಲನ್ನು ಸಿದ್ಧಪಡಿಸಿರುತ್ತಾನೆ. ಹಾಗೆಯೇ ಅಸಹಾಯಕನಾದ ಆತನನ್ನು ಪೋಷಿಸಿ ಬೆಳೆಸಲಿಕ್ಕಾಗಿ ತಂದೆ ತಾಯಂದಿರ ಹೃದಯಗಳಲ್ಲಿ ಪ್ರೀತಿ ವಾತ್ಸಲ್ಯಗಳನ್ನು ಅಲ್ಲಾಹನೇ ಮೂಡಿಸುತ್ತಾನೆ. ಹೀಗೆ ಅವಲೋಕಿಸಿದರೆ ಅಲ್ಲಾಹನು ಮಾನವನಿಗಾಗಿ ಇಲ್ಲಿ ಒದಗಿಸಿರುವ ಅನುಗ್ರಹಗಳನ್ನು ಎಣಿಸಿ ಮುಗಿಸಲು ಸಾಧ್ಯವಿಲ್ಲ. ಇಡೀ ಪ್ರಪಂಚ ಒಂದಲ್ಲೊಂದು ರೀತಿಯಲ್ಲಿ ಮಾನವನ ಸೇವೆಯಲ್ಲಿ ನಿರತವಾಗಿರುವುದು ಕಂಡುಬರುತ್ತದೆ.

ಹೀಗೆ ಅಲ್ಲಾಹನ ಅನುಗ್ರಹಗಳನ್ನು ಅನುಭವಿಸಿ ಇಲ್ಲಿ ಬಾಳುವ ಮಾನವನು ಅಲ್ಲಾಹನನ್ನು ನಿರಾಕರಿಸಿ ಆತನ ಆಜ್ಞೆಗಳನ್ನು ಉಲ್ಲಂಘಿಸುವುದು ಮಹಾ ಅಕ್ರಮವಲ್ಲವೇ. ಅದು ಅಕ್ರಮ ಮಾತ್ರವಲ್ಲ ಅವಿವೇಕವೂ ಆಗಿದೆ. ಏಕೆಂದರೆ ಅಲ್ಲಾಹನ ಈ ನಿಯಮಗಳು ಮಾನವನ ಹಿತಕ್ಕಾಗಿರುವ ಇನ್ನೊಂದು ಅನುಗ್ರಹವಾಗಿದೆ. ಅವುಗಳನ್ನು ತಿರಸ್ಕರಿಸುವುದರಿಂದ ಸ್ವಂತ ವಿಜಯ ಸೌಭಾಗ್ಯಗಳನ್ನೇ ತಿರಸ್ಕರಿಸಿದಂತಾಗುತ್ತದೆ. ಪ್ರತಿಯೊಂದು ದೇಶದಲ್ಲಿಯೂ ಸರಕಾರವು ಅನೇಕ ನಿಯಮಗಳನ್ನು ಜಾರಿಗೊಳಿಸುತ್ತದಷ್ಟೆ. ಆ ನಿಯಮಗಳನ್ನು ಉಲ್ಲಂಘಿಸಿದವರನ್ನು ಆಡಳಿತಗಾರರು ಹಾಗೆಯೇ ಬಿಟ್ಟಾರೇ? ಅವರಿಗೆ ಸಹಜವಾಗಿ ಶಿಕ್ಷೆ ದೊರೆಯುತ್ತದೆ. ಸ್ವದೇಶದ ವಿರುದ್ಧವಾಗಿ ವೈರಿ ದೇಶದೊಡನೆ ನಿಷ್ಠೆ ತೋರುವವರನ್ನು ದೇಶದ್ರೋಹಿ ಎಂದು ಪರಿಗಣಿಸಲಾಗುತ್ತದೆ. ಅಂತಹ ದೇಶ ದ್ರೋಹಿಗಳಿಗೆ ಮರಣ ದಂಡನೆಯನ್ನು ವಿಧಿಸುತ್ತಾರೆ. ಹಾಗಾದರೆ ಅಲ್ಲಾಹನ ಪ್ರಪಂಚದಲ್ಲಿ ಆತನ ಅನುಗ್ರಹಗಳನ್ನು ಅನುಭವಿಸಿ ಆತನಿಗೆ ನಿಷ್ಠೆಯಿಲ್ಲದೆ ಬಾಳುವವರಿಗಿಂತ ದೊಡ್ಡ ದೇಶದ್ರೋಹಿ ಬೇರೆ ಯಾರಿರಬಹುದು? ಅಲ್ಲಾಹನು ಆತನನ್ನು ಕಠೋರವಾಗಿ ಶಿಕ್ಷಿಸಿದರೆ ಅದು

ಅನ್ಯಾಯವೆಂದು ಹೇಳಲು ಸರ್ವಥಾ ಸಾಧ್ಯವಿಲ್ಲ.

ನಮ್ಮನ್ನು ತಂದೆ ತಾಯಂದಿರು ಸಾಕಿ ಬೆಳೆಸುತ್ತಾರೆ. ಹಸಿವೆಯಾದಾಗ ಅವರು ನಮಗೆ ಆಹಾರ ನೀಡುತ್ತಾರೆ. ಧರಿಸಲು ಬಟ್ಟೆಬರೆಗಳನ್ನು ಕೊಡುತ್ತಾರೆ. ರೋಗಿಯಾದರೆ ನಿದ್ದೆಗೆಟ್ಟು ಆರೈಕೆ ಮಾಡುತ್ತಾರೆ. ಹಣ ವ್ಯಯಿಸಿ ಶುಶ್ರೂಷೆ ಮಾಡಿಸುತ್ತಾರೆ. ಇದೆಲ್ಲವನ್ನು ನೀಡುವ ಅವರನ್ನು ಅನುಸರಿಸಬೇಕಾದುದು ನಮ್ಮ ಕರ್ತವ್ಯವಲ್ಲವೇ? ಆದರೆ ಅವರನ್ನು ಅನುಸರಿಸುವ ಬದಲಾಗಿ ಧಿಕ್ಕರಿಸಿದರೆ ಅವರಿಗೆ ನೀಡಬೇಕಾದ ಸೇವೆಯನ್ನು ಬೇರೆಯವರಿಗೆ ನೀಡಿದರೆ ಅದಕ್ಕಿಂತ ದೊಡ್ಡ ಕೃತಘ್ನತೆ ಬೇರೇನಿದೆ? ನಮ್ಮ ತಂದೆ ತಾಯಂದಿರು ನಮ್ಮೊಡನೆ ಏನಾದರೂ ಆಜ್ಞಾಪಿಸಿದರೆ ಅದು ನಮ್ಮ ಹಿತಕ್ಕಾಗಿ ಎಂಬುದು ಖಚಿತ. ಏಕೆಂದರೆ ಅವರಿಗೆ ನಮ್ಮೊಟನೆ ಅಪಾರ ಪ್ರೀತಿ-ಕರುಣೆಯಿದೆಯೆಂದು ನಮಗೆ ತಿಳಿದಿದೆ. ಅಲ್ಲಾಹನು ನಮ್ಮೊಡನೆ ತಂದೆ ತಾಯಿಯರಿಗಿಂತ ಹೆಚ್ಚಿನ ಪ್ರೀತಿ, ವಾತ್ಸಲ್ಯ, ಕರುಣೆಯುಳ್ಳವನಾಗಿದ್ದಾನೆ. ನಮ್ಮನ್ನು, ನಮ್ಮ ತಂದೆ ತಾಯಿಗಳನ್ನು ಆತನೇ ಸೃಷ್ಟಿಸಿದ್ದಾನೆ. ಅವರ ಬಗ್ಗೆ ನಮ್ಮ ಹೃದಯದಲ್ಲಿ ಪ್ರೀತಿ, ಕರುಣೆ, ವಾತ್ಸಲ್ಯಗಳನ್ನು ಅಲ್ಲಾಹನೇ ತುಂಬಿದ್ದಾನೆ. ಹಾಗಿದ್ದರೆ ನಾವು ಅತ್ಯಧಿಕ ಅನುಸರಿಸಬೇಕಾದುದು ಯಾರನ್ನು? ಅಲ್ಲಾಹನನ್ನೇ ಅಲ್ಲವೇ? ಹೌದೆಂದು ಖಚಿತ. ಆತನ ನಿಯಮ ವ್ಯವಸ್ಥೆಯಾಗಿರುವ ಇಸ್ಲಾಮನ್ನು ಅನುಸರಿಸಿ ಜೀವಿಸುವವರಲ್ಲಿಯೇ ನಮ್ಮ ಇಹ ಮತ್ತು ಪರಲೋಕದ ಹಿತ ಅಡಕವಾಗಿದೆ. ಆದ್ದರಿಂದ ಇಸ್ಲಾಮಿನ ವಿಶ್ವಾಸ ಕಾರ್ಯಗಳು ಮತ್ತು ಆಚಾರ ಕರ್ಮಗಳನ್ನು ನಾವು ಚೆನ್ನಾಗಿ ತಿಳಿದಿರಬೇಕಾಗಿದೆ.

ಮಾದರೀ ಪ್ರಶ್ನೆಗಳು

1. 'ಕುಫ್ರ್'ನ ಅರ್ಥವೇನು?
2. ಅಲ್ಲಾಹನು ನಿಮಗೆ ನೀಡಿರುವ ಎರಡು ಅನುಗ್ರಹಗಳನ್ನು ತಿಳಿಸಿರಿ.
3. ಅಲ್ಲಾಹನನ್ನು ನಿರಾಕರಿಸುವವರನ್ನು ಅಲ್ಲಾಹನು ಶಿಕ್ಷಿಸುವುದರ ಇಂಗಿತವನ್ನು ಒಂದು ಉದಾಹರಣೆ ಸಹಿತ ಸ್ಪಷ್ಟಪಡಿಸಿರಿ.

❋ ❋ ❋

ಪಾಠ 3

ಇಸ್ಲಾಮಿನ ಕಂಬಗಳು

ಇಸ್ಲಾಮನ್ನು ಒಂದು ಮನೆಯೆಂದು ನಾವು ಊಹಿಸೋಣ. ಒಂದು ಮನೆ ನಿರ್ಮಿಸಲಿಕ್ಕೆ ಏನೆಲ್ಲ ಬೇಕು? ಪಂಚಾಂಗಬೇಕು, ಕಂಬಗಳು ಬೇಕು, ಗೋಡೆಗಳು ಬೇಕು. ಅನಂತರ ಬಾಗಿಲುಗಳು, ಕಿಟಿಕಿಗಳು ಇತ್ಯಾದಿ ಸುಂದರ ಮತ್ತು ಸುಭದ್ರ ಗೊಳಿಸುವ ಇತರ ಅನೇಕ ಸಾಧನಗಳು ಬೇಕು. ಆದರೆ ಮನೆಯ ಕಂಬಗಳು ಮನೆಯ ಅತಿ ಪ್ರಧಾನ ಘಟಕಗಳಾಗಿವೆ. ಕಂಬವಿಲ್ಲದಿದ್ದರೆ ಗೋಡೆಗಳನ್ನು ಕಟ್ಟಲು ಸಾಧ್ಯವಿಲ್ಲ. ಛಾವಣಿ ನಿರ್ಮಿಸಲು ಸಾಧ್ಯವಿಲ್ಲ. ಕಂಬಗಳು ದುರ್ಬಲವಾದರೆ ಅಥವಾ ಮುರಿದರೆ ಛಾವಣಿಯೂ ಕುಸಿಯುವುದು. ಛಾವಣಿ ಇಲ್ಲದೆ ಮನೆಯಲ್ಲಿ ವಾಸಿಸಲು ಸಾಧ್ಯವಿಲ್ಲವಷ್ಟೇ. 'ಇಸ್ಲಾಮ್' ಎಂಬ ಮನೆಯನ್ನು ಐದು ಕಂಬಗಳಲ್ಲಿ ನಿರ್ಮಿಸಲಾಗಿದೆ. ಪ್ರವಾದಿ(ಸ) ಹೀಗೆ ವಿವರಿಸಿದ್ದಾರೆ:

بُنِيَ الْإِسْلَامُ عَلَى خَمْسٍ،
شَهَادَةِ أَنْ لَا إِلٰهَ إِلَّا اللهُ وَأَنَّ مُحَمَّدًا عَبْدُهُ
وَرَسُولُهُ وَإِقَامِ الصَّلَاةِ وَإِيتَاءِ الزَّكَاةِ وَالْحَجِّ
وَصَوْمِ رَمَضَانَ (بخاری،مسلم)

ಐದು ಕಂಬಗಳಿಂದ ಇಸ್ಲಾಮ್ ನಿರ್ಮಿಸಲ್ಪಟ್ಟಿದೆ. ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲವೆಂದೂ ಮುಹಮ್ಮದ್(ಸ) ಅವರು ಆತನ ದಾಸ ಮತ್ತು ದೂತರೆಂದೂ ಸಾಕ್ಷ್ಯವಹಿಸುವುದು, ನಮಾಝ್ ನೆಲೆಗೊಳಿಸುವುದು, ಝಕಾತ್ ನೀಡುವುದು, ಹಜ್ಜ್ ನಿರ್ವಹಿಸುವುದು, ರಮಝಾನ್‌ನಲ್ಲಿ ಉಪವಾಸ ಆಚರಿಸುವುದು. (ಬುಖಾರಿ ಮುಸ್ಲಿಮ್)

ಶಹಾದತ್ ಕಲಿಮ (ಸಾಕ್ಷ್ಯವಚನ)

ಐದು ಕಂಬಗಳಲ್ಲಿ ಇಸ್ಲಾಮ್ ನೆಲೆನಿಂತಿದೆಯೆಂದು ಈ ಪ್ರವಾದಿವಚನ ಕಲಿಸುತ್ತದೆ. ಇದಕ್ಕೆ 'ಅರ್ಕಾನುಲ್ ಇಸ್ಲಾಮ್' ಎಂಬ ಹೆಸರಿದೆ. ಶಹಾದತ್ ಕಲಿಮ ಅಥವಾ ಸತ್ಯಸಾಕ್ಷ್ಯವಚನವು ಅದರಲ್ಲಿ ಪ್ರಥಮ ಕಂಬವಾಗಿದೆ. ಅರ್ಥಾತ್ ಅಲ್ಲಾಹನು ಮಾತ್ರವೇ ತನ್ನ ಪ್ರಭು, ಆರಾಧ್ಯ ಮತ್ತು ಒಡೆಯನಾಗಿದ್ದಾನೆ. ಮುಹಮ್ಮದ್‌ರನ್ನು(ಸ) ಆತನ ದೂತನೆಂದು ಸಾರಿ ಜೀವನದಾದ್ಯಂತ ಅದಕ್ಕೆ ಸಾಕ್ಷಿಯಾಗಿರುವುದು. ಕೇವಲ ಮನಸ್ಸಿನಿಂದ ಅಲ್ಲಾಹ್ ಮತ್ತು ಪ್ರವಾದಿಯಲ್ಲಿ ವಿಶ್ವಾಸವಿರಿಸಿದರೆ ಓರ್ವನು ಮುಸ್ಲಿಮ್ ಸಮುದಾಯದ ಸದಸ್ಯನೆಂದು ಪರಿಗಣಿಸಲ್ಪಡುವುದಿಲ್ಲ. ಆತ ಅದನ್ನು ಬಹಿರಂಗವಾಗಿ ಸಾರಿ ಜೀವನದಲ್ಲಿ ಅದನ್ನು ಸಾಬೀತು ಪಡಿಸಬೇಕು. ಇತರೆಲ್ಲ ಸೃಷ್ಟಿಗಳೊಂದಿಗಿನ ನಿಷ್ಠೆ ಮತ್ತು ಭಕ್ತಿಯನ್ನು ತೊರೆದು ಕೇವಲ ಅಲ್ಲಾಹನನ್ನು ಮಾತ್ರ ಅನುಸರಿಸುವೆನೆಂದು ಬಹಿರಂಗವಾಗಿ ಸಾರಬೇಕು.

أشهد ان لا اله الا الله وأشهد ان محمدا رسول الله

"ಅಲ್ಲಾಹನಲ್ಲದೇ ಅನ್ಯ ಆರಾಧ್ಯರಿಲ್ಲ. ಮುಹಮ್ಮದ್‌ರು(ಸ) ಆತನ ದೂತನೆಂದು ನಾನು ಸಾಕ್ಷ್ಯ ವಹಿಸುತ್ತೇನೆ" ಎಂದು ಉಚ್ಚರಿಸಿದರೆ ಓರ್ವನು ಮುಸ್ಲಿಮನಾಗುತ್ತಾನೆ. ಹೀಗೆ ಘೋಷಿಸಿ ಕ್ರಿಯಾ ಶೀಲರಾಗುವಾಗ ಅನೇಕ ತ್ಯಾಗಗಳನ್ನು ಸಹಿಸಬೇಕಾಗುವುದು. ಹಲವು ನಷ್ಟಗಳನ್ನು ಅನುಭವಿಸಬೇಕಾಗುವುದು. ಇಡೀ ಜೀವನವನ್ನು ಅಲ್ಲಾಹನಿಗೆ ಸಮರ್ಪಿಸಲು ಸನ್ನದ್ಧನಾಗುವವನ ಮಟ್ಟಿಗೆ ಅವು ಸಮಸ್ಯೆಯೆನಿಸಲಾರದು. ಅದಕ್ಕೆ ಬೇಕಾದ ಧೈರ್ಯ ಮತ್ತು ಮನೋದಾರ್ಢ್ಯವಿರುವವನೇ ನೈಜ ಸತ್ಯವಿಶ್ವಾಸಿಯಾಗಬಲ್ಲನು. ಇದು ಕೇವಲ ನಾಲಗೆಯ ಘೋಷಣೆಯಲ್ಲ. ಅಂತಹ ಬಾಯಿಮಾತನ್ನು ಸಾಕ್ಷಿಯಾಗುವುದೆಂದು ಹೇಳುವಂತಿಲ್ಲವಷ್ಟೆ. ಆ ಘೋಷಣೆಯ ಲಕ್ಷಣಗಳು ಆತನ ಜೀವನದಲ್ಲಿ ಪ್ರತಿಬಿಂಬಿಸಬೇಕು. ಶಹಾದತ್ ಕಲಿಮ ಅಥವಾ ಸತ್ಯಸಾಕ್ಷ್ಯದ ಬಳಿಕ ಹೇಳಿದ ನಾಲ್ಕು ವಿಷಯಗಳು ಆ ಲಕ್ಷಣಗಳಲ್ಲಿ ಪ್ರಧಾನವಾಗಿವೆ. ಇದು ಮುಸ್ಲಿಮನ ಒಂದು ನಿರ್ದಿಷ್ಟ ಕಾರ್ಯಕ್ರಮವಾಗಿದೆ. ಅಲ್ಲಾಹನು ನಿರ್ಣಯಿಸಿದ ಕಾರ್ಯಕ್ರಮ. ಅವುಗಳ ಪ್ರಾಧಾನ್ಯವನ್ನು ಪ್ರತ್ಯೇಕವಾಗಿ ವಿವರಿಸುವುದಕ್ಕಿಂತ ಮುಂಚೆ ಆ

ಕಾರ್ಯಕ್ರಮಗಳನ್ನು ಯಾಕೆ ನಿಶ್ಚಯಿಸಲಾಗಿದೆಯೆಂದು ಸಂಕ್ಷಿಪ್ತವಾಗಿ ತಿಳಿಯೋಣ.

ಮಾನವನು ಅಲ್ಲಾಹನ ಪ್ರತಿನಿಧಿ ಮತ್ತು ಕೇವಲ ಆತನ ದಾಸನಾಗಿ ಭೂಮಿಯಲ್ಲಿ ಬಾಳಬೇಕೆಂದು ಈ ಹಿಂದೆ ಕಲಿತಿದ್ದೇವೆ. ಆತನ ಜೀವನವು ಸಂಪೂರ್ಣವಾಗಿ ಸತ್ಕರ್ಮಗಳಿಂದ ತುಂಬಿರಬೇಕು. ಜೀವನದ ವಿವಿಧ ರಂಗಗಳಲ್ಲಿ ವ್ಯವಹರಿಸುವಾಗ ಆತ ಈ ವಿಷಯಗಳನ್ನು ಮರೆಯಬಾರದು. ನಾನು ಅಲ್ಲಾಹನ ದಾಸ, ಆತನೇ ಈ ಇಡೀ ಪ್ರಪಂಚದ ಒಡೆಯನೆಂಬ ಪ್ರಜ್ಞೆ ಸದಾ ಆತನ ಮನದಲ್ಲಿ ಜೀವಂತವಾಗಿರಬೇಕು. ಮೇಲೆ ಹೇಳಿದ ನಾಲ್ಕು ಆರಾಧನಾ ಕರ್ಮಗಳು ಅದಕ್ಕಾಗಿ ನಿರ್ಣಯಿಸಿರುವ ತರಬೇತಿ ಕಾರ್ಯಕ್ರಮವಾಗಿದೆ. ಆ ಕರ್ಮಗಳನ್ನು ನಿರ್ವಹಿಸುವುದರಿಂದ ಆತನ ಜೀವನವು ಉತ್ತಮಗೊಂಡು ಅಲ್ಲಾಹನ ಸಂಪ್ರೀತಿಯೂ ಸ್ವರ್ಗವೂ ಆತನಿಗೆ ದೊರೆಯುತ್ತದೆ.

ಇಸ್ಲಾಮಿನ ಆರಾಧನಾ ಕರ್ಮಗಳು ಇತರ ಧರ್ಮಗಳ ಆರಾಧನಾ ಕರ್ಮಗಳಿಗಿಂತ ಭಿನ್ನವೆಂಬುದನ್ನು ನಾವು ಇಲ್ಲಿ ತಿಳಿಯಬೇಕು. ದೇವನು ಕೆಲವು ಗಣ್ಯರಂತೆ ಮುಖಸ್ತುತಿ ಮತ್ತು ಪ್ರಶಂಸೆಯಿಂದ ಸಂತೃಪ್ತನಾಗುವವನೆಂಬ ನಂಬಿಕೆ ಕೆಲವು ಧರ್ಮೀಯರಲ್ಲಿದೆ. ಇತರ ಕೆಲವರು ಎಲ್ಲ ಐಹಿಕ ಸುಖಗಳನ್ನು ತೊರೆದು ತಪಸ್ಸಿನಲ್ಲಿ ನಂಬಿಕೆಯಿರಿಸುತ್ತಾರೆ. ಇಸ್ಲಾಮಿನ ವಿಶ್ವಾಸವು ಈ ಎರಡು ವಿಶ್ವಾಸಗಳಿಗಿಂತ ಭಿನ್ನವಾಗಿದೆ. ಅನುಮತಿಸಿದ ಐಹಿಕ ಸುಖಗಳನ್ನು ಅನುಭವಿಸಿ ಜೀವನವನ್ನು ದೇವಾರಾಧನೆಯಾಗಿ ಮಾರ್ಪಡಿಸುವ ವಿಧಾನವನ್ನು ಇಸ್ಲಾಮ್ ಆದೇಶಿಸಿದೆ. ಲೌಕಿಕ ವ್ಯವಹಾರಗಳನ್ನು ಅಲ್ಲಾಹನ ತೃಪ್ತಿಯಂತೆ ನಿರ್ವಹಿಸಬೇಕು. ಹೀಗೆ ಜೀವನವನ್ನೇ ನಿರಂತರವಾದ ದೇವಾರಾಧನೆಯಾಗಿ ಮಾಡಬೇಕು. ಈ ಮಹಾನ್ ಕರ್ತವ್ಯ ನಿರ್ವಹಣೆಗೆ ಬೇಕಾದ ಶಕ್ತಿ ಮತ್ತು ಸ್ಫೂರ್ತಿಯನ್ನು ನೀಡಲಿಕ್ಕಾಗಿ ನಮಾಝ್, ಉಪವಾಸ, ಹಜ್ಜ್ ಇತ್ಯಾದಿ ಕರ್ಮಗಳನ್ನು ನಿಶ್ಚಯಿಸಲಾಗಿದೆ.

ನಮಾಝ್

ಸತ್ಯವಿಶ್ವಾಸಿಗಳ ಲಕ್ಷಣಗಳ ಪೈಕಿ ನಮಾಝನ್ನು ಅಲ್ಲಾಹನು ಕುರ್‌ಆನ್‌ನಲ್ಲಿ

ಪ್ರತ್ಯೇಕವಾಗಿ ಎತ್ತಿ ಹೇಳಿದ್ದಾನೆ. ಇಸ್ಲಾಮ್ ಮತ್ತು ಕುಫ್ರನ್ನು ನಮಾಝ್ ಪ್ರತ್ಯೇಕಿಸುವುದೆಂದು ಪ್ರವಾದಿಯವರೂ(ಸ) ಕಲಿಸಿದ್ದಾರೆ. ಅಂತ್ಯ ದಿನದಲ್ಲಿ ಅಲ್ಲಾಹನು ಮೊದಲು ನಮಾಝ್‌ನ ಬಗ್ಗೆ ವಿಚಾರಣೆ ನಡೆಸುವನು. ನಮಾಝ್ ಓರ್ವ ಮುಸ್ಲಿಮನ ಪ್ರಧಾನ ಕರ್ಮವಾಗಿದೆ. ಆದ್ದರಿಂದಲೇ ಎಳೆ ಪ್ರಾಯದಲ್ಲಿಯೇ ಪೋಷಕರು ನಮಗೆ ನಮಾಝ್‌ನ ಅಭ್ಯಾಸ ಮಾಡಿಸುತ್ತಾರೆ. ಇಸ್ಲಾಮಿನಲ್ಲಿ ನಮಾಝ್‌ಗೆ ಅಷ್ಟೊಂದು ಪ್ರಾಮುಖ್ಯವೇಕೆ? ಅದು ನಮ್ಮ ಜೀವನದಲ್ಲಿ ಯಾವುದೇ ಕೆಡುಕು ಸೇರದಂತೆ ರಕ್ಷಿಸುವ ಪ್ರಧಾನ ಉಪಾಧಿಯಾಗಿದೆ. إن الصلاة تنهى عن الفحشاء والمنكر "ನಮಾಝ್ ನಿಷಿದ್ಧ ಮತ್ತು ದುರ್ನಡತೆಗಳಿಂದ ತಡೆಯುತ್ತದೆ" ಎಂದು ಕುರ್‌ಆನ್‌ನಲ್ಲಿ ಹೇಳಲಾಗಿದೆ. ನಮಾಝ್ ಮಾಡುವಾತನು ದಿನಂಪ್ರತಿ ನದಿಯಲ್ಲಿ ಐದು ಬಾರಿ ಸ್ನಾನ ಮಾಡುವವನಂತೆ ಎಂದು ಪ್ರವಾದಿಯವರೂ(ಸ) ಹೇಳಿದ್ದಾರೆ. ಐದು ಬಾರಿ ಹೊಳೆಯಲ್ಲಿ ಸ್ನಾನ ಮಾಡುವಾತನ ದೇಹದಲ್ಲಿ ಏನಾದರೂ ಮಾಲಿನ್ಯ ಉಳಿದೀತೇ? ಹಾಗೆಯೇ ನಮಾಝನ್ನು ಸರಿಯಾಗಿ ನಿರ್ವಹಿಸುವಾತನ ಜೀವನದಲ್ಲಿಯೂ ಯಾವೊಂದು ಮಾಲಿನ್ಯವೂ ಉಳಿಯಲಾರದು. ಒಂದು ವೇಳೆ ಉಳಿದರೆ ಆತನ ನಮಾಝ್ ಸರಿಯಾಗಿಲ್ಲವೆಂದರ್ಥ. ದಪ್ಪ ಬಟ್ಟೆ ಹೊದ್ದುಕೊಂಡು ಹೊಳೆಯಲ್ಲಿ ಮುಳುಗಿದರೆ ದೇಹದ ಕೊಳಕು ಹೋದೀತೆ? ಇಂಥವರ ನಮಾಝ್ ಕೂಡಾ ಅಷ್ಟೆ. ಕೇವಲ ಒಂದು ವಾಡಿಕೆ. ಆದರೆ ನಮಾಝನ್ನು ಸರಿಯಾಗಿ ನಿರ್ವಹಿಸುವಾತನ ಸ್ಥಿತಿ ಅದಕ್ಕಿಂತ ಭಿನ್ನವಾಗಿದೆ.

ಹದೀಸ್‌ನಲ್ಲಿ ನಮಾಝ್ ಮಾಡಿರಿ ಎಂದು ಹೇಳಿದ್ದಲ್ಲ, 'ಇಖಾಮತುಸ್ಸಲಾತ್' ಅರ್ಥಾತ್ 'ನಮಾಝನ್ನು ನೆಲೆನಿಲ್ಲಿಸಿರಿ' ಎಂದು ಹೇಳಲಾಗಿದೆ. ಈ ಪ್ರಯೋಗ ಬಹಳ ಅರ್ಥಪೂರ್ಣವಾಗಿದೆ. ಒಂದು ಕಾರ್ಯವನ್ನು ಅದರ ಎಲ್ಲ ರೀತಿಯ ಘನತೆ ಗೌರವಗಳಿಂದ ಕಟ್ಟುನಿಟ್ಟಾಗಿ ನಿರ್ವಹಿಸುವುದನ್ನು ಅರಬೀ ಭಾಷಾ ಶೈಲಿಯಲ್ಲಿ 'ಇಕಾಮತ್' ಎನ್ನಲಾಗುತ್ತದೆ. ಹಾಗಾದರೆ ನಮಾಝನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಿದರೆ ಮಾತ್ರ ಅದರ ಫಲ ದೊರೆತೀತು. ನಮಾಝ್‌ನ ಎರಡು ಅಂಶಗಳಿವೆ. ಬಾಹ್ಯರೂಪ ಮತ್ತು ಅಂತರಾತ್ಮ. ಬಾಹ್ಯ ರೂಪಕ್ಕೆ ಸಂಬಂಧಿಸಿದ ನಮಾಝ್‌ನ 'ಶರ್ತ್'-'ಫರ್ಳ್'ಗಳನ್ನು ನೀವು 'ಫಿಕ್ಹ್'ನಲ್ಲಿ ಕಲಿತಿದ್ದೀರಿ. ನಮಾಝ್‌ನ ಅಂತರಾತ್ಮಕ್ಕೆ

ಸಂಬಂಧಿಸಿದ ಕ್ರಮಗಳಿಗೆ 'ಆದಾಬುಸ್ಸಲಾತ್' ಎಂದು ಹೇಳುತ್ತಾರೆ. 'ಶರ್ತ್' ಮತ್ತು 'ಫರ್ಳ್'ಗಳು ನಮಾಝಿನ ದೇಹವಾಗಿದ್ದರೆ 'ಆದಾಬು'ಗಳು ಅದರ ಆತ್ಮವಾಗಿದೆ. 'ಆದಾಬು'ಗಳನ್ನು ಪಾಲಿಸದೆ ನಿರ್ವಹಿಸುವ ನಮಾಝ್ ಜೀವವಿಲ್ಲದ ದೇಹದಂತೆ ಎಂದು ಹೇಳಬೇಕಾಗಿಲ್ಲವಷ್ಟೆ. ಆದ್ದರಿಂದ, ನಮಾಝ್‌ನ ಉದ್ದೇಶ ಈಡೇರಬೇಕಿದ್ದರೆ ಅದರ 'ಆದಾಬು'ಗಳನ್ನು ಪಾಲಿಸಿಯೇ ನಿರ್ವಹಿಸಬೇಕು. ಅವುಗಳಲ್ಲಿ ಪ್ರಧಾನವಾದವುಗಳನ್ನು ಇಲ್ಲಿ ವಿವರಿಸಲಾಗಿದೆ:

1. ನಮಾಝನ್ನು ಅಲ್ಲಾಹನೊಂದಿಗಿನ ಭಯಭಕ್ತಿ, ವಿನಯ ಮತ್ತು ವಿಧೇಯತೆಯಿಂದ ನಿರ್ವಹಿಸಬೇಕು-

ಈ ರೀತಿಯ ನಮಾಝನ್ನು خشوع 'ಖುಷೂಅ್' ತುಂಬಿದ ನಮಾಝ್ ಎಂದು ಹೇಳಲಾಗುತ್ತದೆ. ಸರ್ವ ಲೋಕ ಪ್ರಭುವಾದ ಅಲ್ಲಾಹನ ಮುಂದೆ ನಿಂತಿರುವೆನೆಂಬ ಪ್ರಜ್ಞೆ ಆಗ ಇರಬೇಕು. ಕುರ್‌ಆನ್‌ನ ಆಯತ್ ಮತ್ತು ದಿಕ್ರ್‌ಗಳನ್ನು ಅರ್ಥವರಿತು ಹೇಳಬೇಕು. ನೀವು ಮುಖ್ಯೋಪಾಧ್ಯಾಯರ ಬಳಿಗೆ ಒಂದು ಮನವಿ ಸಲ್ಲಿಸಲಿಕ್ಕಾಗಿ ಹೋಗುತ್ತಿರುವಿರೆಂದು ಭಾವಿಸೋಣ. ಆಗ ನೀವು ಅವರ ಮುಂದೆ ಅತ್ಯಧಿಕ ಗೌರವದಿಂದ ನಿಲ್ಲುತ್ತೀರಲ್ಲವೇ. ಏನು ಹೇಳುತ್ತಿರುವಿರೆಂಬ ಪ್ರಜ್ಞೆಯಿಲ್ಲದೆ ನೀವು ಅವರ ಮುಂದೆ ನಿಲ್ಲುತ್ತೀರಾ? ಖಂಡಿತ ಇಲ್ಲ. ಹಾಗಾದರೆ ಅಲ್ಲಾಹನ ಮುಂದೆ ಪ್ರತಿಜ್ಞೆ ಮಾಡುವಾಗ, ಅಪೇಕ್ಷೆಗಳನ್ನು ಸಲ್ಲಿಸುವಾಗ ಅದಕ್ಕಿಂತಲೂ ಹೆಚ್ಚು ತನ್ಮಯತೆ ಮತ್ತು ವಿಧೇಯತೆಯಿರಬೇಕಲ್ಲವೇ?

2. ನಮಾಝ್‌ನಲ್ಲಿ ಶಿಸ್ತು ಮತ್ತು ಸಮಯ ನಿಷ್ಠೆಯಿರಬೇಕು. ದಿನ ನಿತ್ಯ ಐದು ಹೊತ್ತು ನಮಾಝ್ ನಿಶ್ಚಯಿಸಲಾಗಿದೆಯೆಂದು ನಿಮಗೆ ತಿಳಿದಿದೆ. ಆ ವೇಳೆಯನ್ನು ತಪ್ಪಿಸಬಾರದು. ಇಶಾ ಹೊರತು ಇತರೆಲ್ಲ ನಮಾಝ್‌ಗಳನ್ನು ಆದಿ ಸಮಯದಲ್ಲಿಯೇ ನಿರ್ವಹಿಸುವುದು ಉತ್ತಮ. ಇಶಾ ಸ್ವಲ್ಪ ತಡ ಮಾಡುವುದು ಒಳ್ಳೆಯದು.

3. ಜಮಾಅತ್ (ಸಾಮೂಹಿಕವಾಗಿ) ನೊಂದಿಗೆ ನಮಾಝ್ ಮಾಡಬೇಕು. ಇಮಾಮ್ ಮತ್ತು ಜಮಾಅತ್ ಆಗಿ ನಡೆಯುವ ನಮಾಝನ್ನು ಉಪೇಕ್ಷಿಸುವುದು ತಪ್ಪು. ಯುದ್ಧ ವೇಳೆಯಲ್ಲಿಯೂ ಜಮಾಅತ್ ಆಗಿ ನಮಾಝ್ ಮಾಡಬೇಕೆಂದು ಕುರ್‌ಆನ್ ಆಜ್ಞಾಪಿಸಿರುವುದರಿಂದ ನಮಾಝ್‌ನ ಸ್ಥಾನಮಾನವನ್ನು ತಿಳಿಯಬಹುದು. ಜಮಾಅತ್ ನಮಾಝ್, ಒಂಟಿಯಾಗಿ ನಮಾಝ್ ಮಾಡುವುದಕ್ಕಿಂತ 27 ಪಟ್ಟು ಶ್ರೇಷ್ಠವಾಗಿದೆಯೆಂದು ಪ್ರವಾದಿ(ಸ) ಹೇಳಿದ್ದಾರೆ.

4. ನಮಾಝನ್ನು ಶಿಸ್ತಿನಿಂದ ಸಾವಧಾನವಾಗಿ ನಿರ್ವಹಿಸಬೇಕು. ಗಡಿಬಿಡಿಯಿಂದ ನಮಾಝ್ ಮಾಡಬಾರದು. ರುಕೂಅ್, ಸುಜೂದ್ ಇತ್ಯಾದಿಗಳಲ್ಲಿ ಹೇಳಬೇಕಾದ ಪ್ರಾರ್ಥನೆಗಳನ್ನು ಸಾವಧಾನವಾಗಿ ಹೇಳಿ ನಮಾಝ್ ಮಾಡಬೇಕು.

ಈ ಎಲ್ಲ ಕ್ರಮಗಳನ್ನು ಪಾಲಿಸಿ ನಮಾಝ್ ಮಾಡುವಾತನ ಜೀವನದಲ್ಲಿ ಅದರ ಫಲ ಕಂಡು ಬರುವುದು. ಮುಂಜಾನೆ ಸೂರ್ಯೋದಯಕ್ಕಿಂತ ಮುಂಚೆ 'ಸುಬ್‌ಹ್' ನಮಾಝ್‌ಗಾಗಿ ಆತನು ಅಲ್ಲಾಹನ ಮುಂದೆ ಬಂದು ನಿಲ್ಲುತ್ತಾನೆ. "ನನ್ನ ಜೀವನ, ಮರಣ, ಆರಾಧನಾ ಕರ್ಮಗಳೆಲ್ಲವೂ ನಿನಗೆ, ನಿನ್ನ ಹೊರತು ಯಾರ ದಾಸ್ಯವನ್ನೂ ಮಾಡುವುದಿಲ್ಲ. ನಿನ್ನ ಹೊರತು ಅನ್ಯರೊಡನೆ ಸಹಾಯ ಬೇಡುವುದಿಲ್ಲ"ವೆಂದು ಪ್ರತಿಜ್ಞೆ ಮಾಡಿ ಆತನು ಜೀವನ ವ್ಯವಹಾರಗಳಲ್ಲಿ ನಿರತನಾಗುತ್ತಾನೆ. ನಿಷ್ಕಳಂಕ ಮತ್ತು ಮನಃಪೂರ್ವಕವಾಗಿ ಈ ಪ್ರತಿಜ್ಞೆ ಮಾಡಿದಾತನು ಅಲ್ಲಾಹನ ಆಜ್ಞೆಗೆ ವಿರುದ್ಧವಾಗಿ ವ್ಯಾಪಾರದಲ್ಲಿ ವಂಚನೆ ನಡೆಸುವ, ಅನ್ಯರ ಮುಂದೆ ತಲೆಬಾಗುವ, ಸಹೋದರರನ್ನು ಉಪದ್ರವಿಸುವ ಅಥವಾ ದುಷ್ಕರ್ಮ ವೆಸಗುವ ಕಾರ್ಯಕ್ಕೆ ತೊಡಗಿಯಾನೇ? ಮಧ್ಯಾಹ್ನ ಊಟ ಮತ್ತು ತಾತ್ಕಾಲಿಕ ವಿಶ್ರಾಂತಿಗಾಗಿ ಕೆಲಸ ನಿಲ್ಲಿಸಿದಾಗ 'ಝುಹರ್' ನಮಾಝ್‌ನಲ್ಲಿ ಈ ಪ್ರತಿಜ್ಞೆಯನ್ನು ಆತ ಪುನರಾವರ್ತಿಸುತ್ತಾನೆ. ತರುವಾಯ 'ಅಸರ್' ನಮಾಝ್‌ನಲ್ಲಿಯೂ ಅನಂತರ 'ಮಗ್‌ರಿಬ್' ನಮಾಝ್‌ನಲ್ಲಿಯೂ ನಿದ್ರಿಸುವುದಕ್ಕಿಂತ ಮುಂಚೆ 'ಇಶಾ' ನಮಾಝ್‌ನಲ್ಲಿಯೂ ಸ್ವಲ್ಪ ಮಧ್ಯಂತರದ ಬಳಿಕ ಪ್ರತಿಜ್ಞೆಯನ್ನು

ಪುನರಾವರ್ತಿಸುತ್ತಿರುತ್ತಾನೆ. ಪ್ರಜ್ಞಾಪೂರ್ವಕ ಹೀಗೆ ಮಾಡುವಾತನಿಗೆ ಕೆಡುಕುಗಳಿಗೆ ಕೈ ಹಾಕಲು ಖಂಡಿತ ಸಾಧ್ಯವಿಲ್ಲ. ದಿನ ನಿತ್ಯದ ಈ ಅನುಷ್ಠಾನಗಳ ಹೊರತಾಗಿ ವಾರದಲ್ಲೊಮ್ಮೆ ಪ್ರತಿ ಶುಕ್ರವಾರ ಊರಿನ ಜನರೆಲ್ಲರೂ ಮಸೀದಿಯಲ್ಲಿ ಸೇರುತ್ತಾರೆ. ಅದುವೇ ಜುಮ್‌ಆ. ಜುಮ್‌ಆ ನಮಾಝ್‌ಗಿಂತ ಮುಂಚೆ ಇಮಾಮ್ ಭಾಷಣ ಮಾಡುತ್ತಾರೆ. ಮುಸ್ಲಿಮರ ಸಾಮಾನ್ಯ ಸಮಸ್ಯೆಗಳು, ಉಪದೇಶ ಮತ್ತು ಉದ್ಬೋಧಗಳು ಭಾಷಣದ ವಿಷಯವಾಗಿರುತ್ತದೆ. ಅಲ್ಲಾಹನ ಪ್ರತಿನಿಧಿಯೆಂಬ ಹೊಣೆಗಾರಿಕೆಯನ್ನು ಆತನಿಗೆ ಜ್ಞಾಪಿಸಲು ಅದು ಸಹಾಯಕವಾಗುತ್ತದೆ.

ಝಕಾತ್

ಝಕಾತ್, ಇಸ್ಲಾಮಿನ ಮೂರನೇಯ ಕಂಬ. ಪವಿತ್ರ ಕುರ್‌ಆನ್‌ನ ಹಲವೆಡೆಗಳಲ್ಲಿ ನಮಾಝ್‌ನ ಜತೆಯಲ್ಲಿಯೇ ಝಕಾತ್‌ನ ಬಗ್ಗೆಯೂ ಹೇಳಲಾಗಿದೆ. ಝಕಾತಿನ ಪ್ರಾಮುಖ್ಯವನ್ನು ಅದರಿಂದ ಗ್ರಹಿಸಬಹುದು. ಪ್ರವಾದಿಯವರ(ಸ) ಮರಣದ ಬಳಿಕ ಝಕಾತ್ ನೀಡಲು ನಿರಾಕರಿಸಿದವರೊಡನೆ ಪ್ರಥಮ ಖಲೀಫ ಅಬೂಬಕರ್‌ರು(ರ) ಯುದ್ಧ ಸಾರಿದ್ದರು. ಇದು ಝಕಾತಿನ ಮೇಲ್ಮೆಯನ್ನು ಸೂಚಿಸುತ್ತದೆ. ಝಕಾತ್ ನೀಡದವರಿಗೆ ಪರಲೋಕದಲ್ಲಿ ಕಠೋರ ಶಿಕ್ಷೆ ದೊರೆಯುತ್ತದೆ. ಝಕಾತ್ ನೀಡದೆ ಸಂಗ್ರಹಿಸಿದ ಬೆಳ್ಳಿ ಬಂಗಾರವನ್ನು ನರಕಾಗ್ನಿಯಲ್ಲಿ ಕಾಯಿಸಿ ಅವರ ಹಣೆ ಮತ್ತು ಬೆನ್ನಿಗೆ ಸುಡಲಾಗುವುದೆಂದು ಅಲ್ಲಾಹನು ಕುರ್‌ಆನ್‌ನಲ್ಲಿ ಎಚ್ಚರಿಕೆ ನೀಡಿದ್ದಾನೆ.

ಝಕಾತ್, ಶ್ರೀಮಂತರ ಸಂಪತ್ತಿನಲ್ಲಿ ಬಡ ದುರ್ಬಲರಿಗಿರುವ ಹಕ್ಕಾಗಿದೆ. ಒಂದು ವರ್ಷ ಪೂರ್ಣಗೊಂಡಾಗ ನಿರ್ದಿಷ್ಟ ಮೊತ್ತ ಉಳಿತಾಯವಿರುವವರು ಅದರ ಒಂದು ನಿರ್ದಿಷ್ಟ ಪಾಲನ್ನು ಕುರ್‌ಆನ್ ಹೇಳಿರುವ ಕೆಲವು ವಿಶಿಷ್ಟ ವಿಭಾಗಗಳಿಗೆ ನೀಡಬೇಕು. ಇದು ಝಕಾತಿನ ಸಾಮಾನ್ಯ ನಿಯಮವಾಗಿದೆ. ಝಕಾತ್ ಎಂಬ ಅರಬೀ ಪದಕ್ಕೆ ವೃದ್ಧಿ, ಶುದ್ಧಿ ಇತ್ಯಾದಿ ಅರ್ಥಗಳಿವೆ. ಝಕಾತ್, ಸಂಪತ್ತಿನ ಕೊಳೆಯನ್ನು ನಿವಾರಿಸಿ ಶುದ್ಧಿಗೊಳಿಸಿ ಅದನ್ನು ವೃದ್ಧಿಸುತ್ತದೆ. ಉಪಯೋಗಿಸದೆ ಶೇಖರಗೊಂಡಿರುವ ಬಾವಿಯ ನೀರಿನ ಗತಿ ಹೇಗಿರಬಹುದು? ಅದರಲ್ಲಿ ಕೊಳೆ-ಕೆಸರು ತುಂಬಬಹುದು.

ಕ್ರಮೇಣ ಬತ್ತಿ ಹೋಗಲೂ ಬಹುದು. ಆದರೆ ಪದೇ ಪದೇ ಅದರಿಂದ ನೀರು ಸೇದುತ್ತಲಿದ್ದರೆ? ಅದು ಹಾಳಾಗಲಾರದು ಅಥವಾ ವ್ಯರ್ಥ ಬತ್ತಿ ಹೋಗಲಾರದು. ನೀರು ತೆಗೆಯುವ ಪ್ರಮಾಣದಲ್ಲಿ ತಳದಿಂದ ಒಸರು ಬಂದು ಸೇರುವುದು. ಸಂಪತ್ತಿನ ಸ್ಥಿತಿಯೂ ಅಷ್ಟೆ. ಉತ್ತಮ ಮಾರ್ಗದಲ್ಲಿ ವ್ಯಯಿಸುವುದರಿಂದ ಅದರಲ್ಲಿ ವೃದ್ಧಿಯೇ ಉಂಟಾಗುತ್ತದೆ. ಅದು ಮುಗಿದು ಹೋಗಲಾರದು.

ಅಲ್ಲಾಹನು ಝಕಾತ್ ನೀಡಲು ಆಜ್ಞಾಪಿಸಿರುವಾಗ ಅದಕ್ಕೆ ಬದ್ಧನಾದವನು ನೀಡದಿದ್ದರಾದೀತೆ! ಅಲ್ಲಾಹನೇ ಆತನ ಕೈವಶವಿರುವ ಸಂಪತ್ತಿನ ಒಡೆಯ. ಅಲ್ಲಾಹನು ಆತನ ಹಸ್ತಗಳಲ್ಲಿ ಅದನ್ನೊಂದು ವಿಶ್ವಸ್ಥ ನಿಧಿಯಾಗಿ (ಅಮಾನತ್) ನೀಡಿದ್ದಾನೆ. ನಾವು ಯಾರ ಬಳಿಯಾದರೂ ಒಂದು ವಸ್ತುವನ್ನು ಜೋಪಾನವಾಗಿರಿಸಲು ಕೊಟ್ಟರೆ ನಾವು ಕೇಳಿದಾಗ ಹಿಂತಿರುಗಿಸಬೇಕಲ್ಲವೇ? ಅನ್ಯಥಾ ನಾವು ಅವರನ್ನು ವಂಚಕನೆಂದು ಹೇಳುತ್ತೇವೆ. ವಸ್ತುಶಃ ಅಲ್ಲಾಹನು ವಿಶ್ವಸ್ಥ ನಿಧಿಯಾಗಿ ಕೊಟ್ಟ ಸಂಪತ್ತನ್ನು ಸಂಪೂರ್ಣವಾಗಿ ಮರಳಿ ಕೇಳುವುದಿಲ್ಲ. ಅದನ್ನು ಉಪಯೋಗಿಸುವ ಅನುಮತಿ ನೀಡಿರುವುದರೊಂದಿಗೆ ಅದರಿಂದ ಒಂದಂಶವನ್ನು ಸ್ವಸಹೋದರನಿಗೆ ನೀಡಬೇಕೆಂದಷ್ಟೇ ಹೇಳಿರುತ್ತಾನೆ. ಅದಕ್ಕೆ ಸಿದ್ಧನಿಲ್ಲದವನು ಎಷ್ಟೊಂದು ನಿರ್ದಯಿ ಮತ್ತು ಸ್ವಾರ್ಥಿಯೆಂದು ಆಲೋಚಿಸಿ ನೋಡಿರಿ.

ಝಕಾತ್, ಶ್ರೀಮಂತರು ಬಡವರಿಗೆ ನೀಡುವ ಭಿಕ್ಷೆಯಲ್ಲವೆಂಬುದನ್ನು ಪ್ರತ್ಯೇಕವಾಗಿ ತಿಳಿಯಬೇಕು. ಅದು ಬಡವರ ಹಕ್ಕು. ಝಕಾತ್ ನೀಡುವ ಅನೇಕ ಮಂದಿ ಅದು ತಮ್ಮ ಔದಾರ್ಯವೆಂಬ ಭಾವನೆಯಿಂದಲೇ ನೀಡುತ್ತಿದ್ದಾರೆ. ಬಡವರಾದರೋ ಭಿಕ್ಷುಕರಂತೆ ಅವರ ಹೊಸ್ತಿಲಲ್ಲಿ ಕೈ ಚಾಚಿ ನಿಲ್ಲುತ್ತಾರೆ. ಸರಿಯಾದ ಇಸ್ಲಾಮೀ ವ್ಯವಸ್ಥೆಯಿಲ್ಲದಿರುವುದೇ ಈ ದುರಂತಕ್ಕೆ ಕಾರಣ. ಇಸ್ಲಾಮೀ ವ್ಯವಸ್ಥೆಯಲ್ಲಿ ಸರಕಾರವು ನೇರವಾಗಿ ಶ್ರೀಮಂತರಿಂದ ಝಕಾತ್ ಮೊತ್ತವನ್ನು ವಸೂಲು ಮಾಡಿ ಬಡವರ ಆತ್ಮಾಭಿಮಾನಕ್ಕೆ ಧಕ್ಕೆಯಾಗದಂತೆ ಅದನ್ನು ವಿತರಿಸುತ್ತದೆ. ಇಸ್ಲಾಮೀ

ಸರಕಾರವಿಲ್ಲದ ದೇಶಗಳಲ್ಲಿ ವಿಶೇಷ ಸಮಿತಿಗಳನ್ನು ರಚಿಸಿ ಝಕಾತ್ ಶೇಖರಿಸಿ ಸಾಮೂಹಿಕ ವಿತರಣೆಯ ವ್ಯವಸ್ಥೆಯನ್ನು ಮಾಡಬಹುದು. ಅದರಿಂದ ಝಕಾತ್‌ನ ಹೆಸರಲ್ಲಿ ಭಿಕ್ಷುಕರನ್ನು ಸೃಷ್ಟಿಸುವ ಇಂದಿನ ವಿಕಲ ರೂಪ ಬದಲಾಗಬಹುದು.

ನಿರ್ದಿಷ್ಟ ಝಕಾತ್ ಕೊಟ್ಟು ಬಿಟ್ಟರೆ ಎಲ್ಲ ಸಾಂಪತ್ತಿಕ ಹೊಣೆಗಾರಿಕೆ ಮುಗಿಯಿತೆಂದು ಭಾವಿಸುವುದು ಸರಿಯಲ್ಲ. ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ ಬಗ್ಗೆ ಬೇರೆ ಆಲೋಚಿಸಲೇ ಬೇಕಾಗಿಲ್ಲವೆಂದು ಇದರರ್ಥವಲ್ಲ. ಓರ್ವ ಮುಸ್ಲಿಮನು ಬಡವರಿಗೆ ತನ್ನಿಂದ ಸಾಧ್ಯವಿರುವಷ್ಟು ನೆರವು ನೀಡಿ ಇತರ ಸತ್ಕಾರ್ಯಗಳಿಗಾಗಿ ತನ್ನ ಸಂಪತ್ತನ್ನು ವ್ಯಯಿಸುತ್ತಿರುತ್ತಾನೆ. ಮಾನವ ಹೃದಯದಲ್ಲಿ ಸಂಪತ್ತಿನ ಬಗೆಗಿನ ಅಮಿತ ಪ್ರೀತಿಯನ್ನು ತೊಲಗಿಸುವುದೂ ಝಕಾತಿನ ಧ್ಯೇಯಗಳಲ್ಲೊಂದಾಗಿದೆ. ಅಗತ್ಯವಿರುವಾಗಲೆಲ್ಲಾ ಅಲ್ಲಾಹನ ಮಾರ್ಗದಲ್ಲಿ ಮುಕ್ತವಾಗಿ ಹಣ ವ್ಯಯಿಸುವ ಉದಾರತೆ ಪ್ರತಿಯೊಬ್ಬ ಮುಸ್ಲಿಮನಲ್ಲಿಯೂ ಇರಬೇಕು. ಝಕಾತ್ ಅದರ ತರಬೇತಿಯೂ ಆಗಿದೆ. ನಾವು ಮಾತ್ರವಲ್ಲ ನಮ್ಮ ಕಿಸೆಯೂ 'ಮುಸ್ಲಿಮ್' ಆಗಿರಬೇಕು.

ಉಪವಾಸ

ರಮಝಾನ್ ಉಪವಾಸವು ಇಸ್ಲಾಮಿನ ನಾಲ್ಕನೇಯ ಕಂಬವಾಗಿದೆ. ರಮಝಾನ್ ತಿಂಗಳಲ್ಲಿ ಮುಸ್ಲಿಮರೆಲ್ಲರೂ ಪ್ರಭಾತದಿಂದ ಸೂರ್ಯಾಸ್ತಮಾನದ ತನಕ ಆಹಾರ ಪಾನೀಯಗಳನ್ನು ತೊರೆಯಬೇಕಾದುದು ಕಡ್ಡಾಯವಾಗಿದೆ. ಯಾತ್ರಿಕರು, ರೋಗಿಗಳು ಮತ್ತು ಇತರ ಕೆಲವು ನಿರ್ದಿಷ್ಟ ಕಾರಣ ವಿರುವ ವರಿಗೆ ಮಾತ್ರ ಅದರಿಂದ ವಿನಾಯಿತಿಯಿದೆ.

ಉಪವಾಸವು ನಮಾಝ್‌ನಂತೆಯೇ ಮುಸ್ಲಿಮನಿಗೆ ಆತನ ಕರ್ತವ್ಯಗಳನ್ನು ನೆನಪಿಸಿ ಅವುಗಳನ್ನು ನಿಷ್ಕಳಂಕ ರೀತಿಯಲ್ಲಿ ನಿರ್ವಹಿಸುವ ಶಕ್ತಿ ನೀಡುವಂತಹ ಆಚಾರ ಕರ್ಮವಾಗಿದೆ.

"ನೀವು ಭಯಭಕ್ತಿಯುಳ್ಳವರಾಗಲಿಕ್ಕಾಗಿ ನಿಮ್ಮ ಪೂರ್ವಜರಂತೆ ನಿಮಗೂ

ಉಪವಾಸವನ್ನು ಕಡ್ಡಾಯಗೊಳಿಸಲಾಗಿದೆ" ಎಂದು ಕುರ್‌ಆನ್ ಹೇಳಿದೆ. 'ತಕ್ವಾ' (ದೇವಭಕ್ತಿ) ಬೆಳೆಸುವುದೇ ಉಪವಾಸದ ಉದ್ದೇಶವೆಂದು ಇದರಿಂದ ವ್ಯಕ್ತವಾಗುತ್ತದೆ.

ನಿರಂತರ ಕೆಲಸ ಮಾಡುವ ಯಂತ್ರಗಳನ್ನು ವರ್ಷದಲ್ಲೊಂದು ಬಾರಿ ಬಿಚ್ಚಿ ಓಯಿಲ್ ಮತ್ತು ಗ್ರೀಸ್ ಹಾಕಿ ಅದರ ಕ್ರಿಯಾ ಸಾಮರ್ಥ್ಯವನ್ನು ಹೆಚ್ಚಿಸುವ ರೂಢಿಯಿದೆಯಷ್ಟೆ? ಉಪವಾಸದಿಂದ ಅದನ್ನೇ ಮಾಡಲಾಗುತ್ತದೆ. ಯಂತ್ರದ ಯಾವುದಾದರೂ ಭಾಗವು ದುರ್ಬಲವಾಗಿದೆಯೇ ಎಂದು ಪರೀಕ್ಷಿಸುವಂತೆ ನನ್ನಲ್ಲಿ ಗತಕಾಲದಲ್ಲಿ ಏನಾದರೂ ತಪ್ಪು ಸಂಭವಿಸಿದೆಯೇ ಎಂದು ಪರಿಶೀಲಿಸಿ ಲೋಪದೋಷಗಳನ್ನು ತಿದ್ದಿ ಮುಂದೆ ಸಾಗುವ ಅವಕಾಶವನ್ನು ಅದು ನೀಡುತ್ತದೆ. ಉಪವಾಸವು ಒಳಿತು ಕೆಡುಕುಗಳಲ್ಲಿ ಒಂದು ವರ್ಷದ ಲಾಭ ನಷ್ಟಗಳ ಲೆಕ್ಕವನ್ನು ಪರಿಶೀಲಿಸುವ ಸಂದರ್ಭವಾಗಿದೆ. ಗತಕಾಲವನ್ನು ಪರಿಶೀಲಿಸಿ ಅದರಲ್ಲಿ ಬಂದ ತಪ್ಪುಗಳನ್ನು ತಿದ್ದಿ ಹೊಸ ಕಾರ್ಯಕ್ರಮಗಳನ್ನು ರಮಝಾನ್‌ನಲ್ಲಿ ರೂಪಿಸಲಾಗುತ್ತದೆ.

ಮುಸ್ಲಿಮನು ತನ್ನೆಲ್ಲ ಕರ್ಮಗಳಲ್ಲಿ ಅಲ್ಲಾಹನ ಅತೃಪ್ತಿಗೆ ಹೆದರಿ ಆತನ ನಿಯಮಗಳನ್ನು ಚೆನ್ನಾಗಿ ಪಾಲಿಸಿ ನಿರ್ವಹಿಸುವುದನ್ನು 'ತಕ್ವಾ' ಎನ್ನಲಾಗುತ್ತದೆ. ಈ ಗುಣ ಬೆಳೆಯಲು ಉಪವಾಸವು ಅತ್ಯಂತ ಸೂಕ್ತ ಆರಾಧನಾ ಕರ್ಮವಾಗಿದೆ. ರಮಝಾನ್ ತಿಂಗಳಲ್ಲಿ ಮುಸ್ಲಿಮರೆಲ್ಲರೂ ಉಪವಾಸ ಆಚರಿಸಬೇಕೆಂದು ಆಜ್ಞಾಪಿಸಲಾಗಿದೆ. ಆಗ ಇಡೀ ಮುಸ್ಲಿಮ್ ಸಮುದಾಯದಲ್ಲಿ 'ತಕ್ವಾ'ದ ಸ್ಫೂರ್ತಿ ಲಾಸ್ಯವಾಡುತ್ತದೆ. ದುಷ್ಕರ್ಮಗಳಿಂದ ದೂರವಿದ್ದು ಹೆಚ್ಚೆಚ್ಚು ಪುಣ್ಯ ಕರ್ಮಗಳನ್ನು ಮಾಡಲು ಎಲ್ಲರೂ ವಿಶೇಷವಾಗಿ ಶ್ರಮಿಸುತ್ತಾರೆ. ನಮಾಝ್, ಝಕಾತ್, ಹಜ್ಜ್ ಇತ್ಯಾದಿ ಆರಾಧನಾ ಕರ್ಮಗಳನ್ನು ಎಲ್ಲರಿಗೂ ನೋಡಲು ಸಾಧ್ಯವಿದೆ. ಅವುಗಳಲ್ಲಿ ಅನ್ಯರಿಗೆ ಗೋಚರಿಸುವಂತಹ ಬಾಹ್ಯ ರೂಪ ಇದೆ. ಆದರೆ ಉಪವಾಸವು ಅವುಗಳಿಗಿಂತ ಭಿನ್ನವಾಗಿದೆ. ಅದಕ್ಕೆ ಅಂತಹ ಬಾಹ್ಯ ರೂಪವಿಲ್ಲ. ಒಬ್ಬರಿಗೆ ನಿಜವಾಗಿಯೂ ಉಪವಾಸವಿದೆಯೇ ಎಂದು ತಿಳಿಯಲು ಅಲ್ಲಾಹನಿಗೆ ಮಾತ್ರ ಸಾಧ್ಯ. ಗುಪ್ತವಾಗಿ ಆಹಾರ ಸೇವಿಸಿ ಒಬ್ಬರು ಅನ್ಯರ ದೃಷ್ಟಿಯಲ್ಲಿ ಉಪವಾಸಿಗನಂತೆ ನಟಿಸಬಹುದು. ಆದರೆ, ಅಲ್ಲಾಹನನ್ನು ವಂಚಿಸಲು ಸಾಧ್ಯವಿಲ್ಲ. ಆದ್ದರಿಂದ ತನ್ನ ಎಲ್ಲ ಕರ್ಮಗಳನ್ನು ಅಲ್ಲಾಹನು ನೋಡುತ್ತಿರುವನೆಂಬ ದೃಢ ವಿಶ್ವಾಸವಿರುವವರಿಗೆ ಮಾತ್ರ ಉಪವಾಸ ಆಚರಿಸಲು ಸಾಧ್ಯ.

'ತಕ್ವಾ'ವನ್ನು ಬೆಳೆಸುವುದೇ ಉಪವಾಸದ ಉದ್ದೇಶವೆಂದು ಹೇಳಿದೆ. ಆದ್ದರಿಂದ ಉಪವಾಸ ಕಾಲದಲ್ಲಿ ಪಾಪಗಳಿಂದ ಸಂಪೂರ್ಣ ದೂರನಿಂತು ಸತ್ಕರ್ಮಗಳಲ್ಲಿ ಹೆಚ್ಚಿನ ಆಸಕ್ತಿ ತೋರಿಸಬೇಕಾಗಿದೆ. ಹಾಗಲ್ಲದೇ ವ್ಯಥಾ ಹಸಿವೆಯಿಂದಿರುವುದರಿಂದ ಉಪವಾಸದ ಫಲ ಸಿದ್ಧಿಸಲಾರದು. ಆ ಕುರಿತು ಪ್ರವಾದಿ(ಸ) ಹೇಳಿದ್ದಾರೆ:

من لم يدع قول الزور والعمل به فليس لله حاجة في أن
يدع طعامه وشرابه (بخاری)

"ಒಬ್ಬನು ಸುಳ್ಳು ಮಾತು ಮತ್ತು ವರ್ತನೆಗಳನ್ನು ತೊರೆಯದಿದ್ದರೆ ಆತನು ಆಹಾರ ಪಾನೀಯಗಳನ್ನು ತೊರೆಯಬೇಕೆಂಬ ಯಾವ ಅಗತ್ಯವೂ ಅಲ್ಲಾಹನಿಗಿಲ್ಲ."

ಹಾಗಾದರೆ ರಮಝಾನ್ ತಿಂಗಳಲ್ಲಿ ಉಪವಾಸ ಆಚರಿಸುವ ವೇಳೆ ಎಲ್ಲ ರೀತಿಯ ತಪ್ಪುಗಳಿಂದಲೂ ನಾವು ದೂರ ನಿಲ್ಲಬೇಕು. ಅನವಶ್ಯಕ ಮಾತು, ತಕರಾರುಗಳನ್ನು ತೊರೆಯಬೇಕು. ಅಷ್ಟು ಮಾತ್ರ ಸಾಲದು. ಅದರೊಂದಿಗೆ ಪುಣ್ಯ ಕರ್ಮಗಳಲ್ಲಿಯೂ ತಲ್ಲೀನರಾಗಬೇಕು. ಉಪವಾಸ ಆಚರಿಸುವಾಗ ನಾವು ಅನುಭವಿಸುವ ಹಸಿವು ಮತ್ತು ದಾಹವು ಬಡವರ ಸ್ಥಿತಿಯನ್ನು ನಮಗೆ ಮನಗಾಣಿಸುತ್ತದೆ. ಎಷ್ಟೋ ಜನರು ಉಪವಾಸವಿಲ್ಲದ ಕಾಲದಲ್ಲಿಯೂ ಹಸಿವೆಯಿಂದ ಬಳಲುತ್ತಾರೆ. ಅವರಿಗಾಗಿ ಮನಬಿಚ್ಚಿ ದಾನಧರ್ಮಗಳನ್ನು ಮಾಡಬೇಕು. ರಮಝಾನ್ ತಿಂಗಳಲ್ಲಿ ದಾನಧರ್ಮಗಳಿಗೆ ವಿಶೇಷ ಪುಣ್ಯವಿದೆ. ಮಲಗಿ ನಿದ್ರಿಸಿ, ಅನವಶ್ಯಕ ಮಾತು ಮತ್ತು ಆಟ ವಿನೋದಗಳಲ್ಲಿ ಕಾಲ ಕಳೆಯುವ ಬದಲಾಗಿ ಕುರ್‌ಆನ್ ಪಾರಾಯಣ ಮಾಡಬೇಕು. ಕುರ್‌ಆನ್, ರಮಝಾನ್ ತಿಂಗಳಲ್ಲಿಯೇ ಅವತೀರ್ಣಗೊಂಡಿದೆ. ಸುನ್ನತ್ ನಮಾಝ್ ಮತ್ತು ತರಾವೀಹ್ ಇತ್ಯಾದಿಗಳನ್ನು ಶ್ರದ್ಧೆಯಿಂದ ನಿರ್ವಹಿಸಬೇಕು. ಇದೆಲ್ಲವೂ ಉಪವಾಸದ ಧ್ಯೇಯವಾಗಿರುವ 'ತಕ್ವಾ'ವನ್ನು ನಮ್ಮ ಜೀವನದಲ್ಲಿ ಬೆಳೆಸುವ ಮಾರ್ಗಗಳಾಗಿವೆ.

'ಲೈಲತುಲ್ ಕದ್ರ್' ಎಂಬ ಅತಿಶ್ರೇಷ್ಠ ರಾತ್ರಿಯೂ ರಮಝಾನ್‌ನಲ್ಲಿದೆ. ಸಾವಿರ ತಿಂಗಳುಗಳಿಗಿಂತ ಶ್ರೇಷ್ಠವಾದ ಒಂದು ರಾತ್ರಿ ಇದೆಂದು ಅಲ್ಲಾಹನು

ಕುರ್‌ಆನ್‌ನಲ್ಲಿ ಹೇಳಿರುತ್ತಾನೆ. ರಮಝಾನಿನ ಯಾವ ದಿನದಲ್ಲಿ ಆ ರಾತ್ರಿಯಿದೆಯೆಂದು ಸ್ಪಷ್ಟಪಡಿಸಿಲ್ಲ. ರಮಝಾನ್‌ನ ಎಲ್ಲ ದಿನಗಳಲ್ಲಿಯೂ ಆ ರಾತ್ರಿಯನ್ನು ನಿರೀಕ್ಷಿಸಿ ಪುಣ್ಯ ಕರ್ಮಗಳಲ್ಲಿ ನಿರತರಾಗಬೇಕೆಂದು ಅದನ್ನು ನಮಗೆ ಅಜ್ಞಾತ ಗೊಳಿಸಲಾಗಿದೆ.

ಹಜ್ಜ್

ಇಸ್ಲಾಮಿನ ಐದನೇ ಕಂಬವೇ ಹಜ್ಜ್. ಅರೇಬಿಯಾದ ಮಕ್ಕಾ ನಗರದಲ್ಲಿರುವ ಪವಿತ್ರ ಕಅಬಾ ಭವನಕ್ಕೆ ಪಯಣ ಬೆಳೆಸುವುದನ್ನು ಹಜ್ಜ್ ಎನ್ನಲಾಗುತ್ತದೆ. ಝಕಾತ್ ಸ್ಥಿತಿವಂತರ ಕಡ್ಡಾಯ ಕರ್ತವ್ಯವಾಗಿದೆ. ಹಾಗೆಯೇ ಪವಿತ್ರ ಕಅಬಾದ ತನಕ ಪ್ರಯಾಣ ಬೆಳೆಸುವ ಆರ್ಥಿಕ ಸೌಲಭ್ಯ ಮತ್ತು ದೈಹಿಕ ಆರೋಗ್ಯವಿರುವ ಎಲ್ಲ ಮುಸ್ಲಿಮರಿಗೂ ಹಜ್ಜ್ ಕಡ್ಡಾಯವಾಗಿದೆ.

ಪ್ರವಾದಿ ಇಬ್ರಾಹೀಮ್(ಅ) ಮತ್ತು ಪುತ್ರ ಇಸ್ಮಾಈಲ್(ಅ) ನಿರ್ಮಿಸಿದ ಪವಿತ್ರ ಕಅಬಾ ಭವನಕ್ಕೆ ಇಸ್ಲಾಮಿನಲ್ಲಿ ವಿಶೇಷ ಮಹತ್ವ ಮತ್ತು ಸ್ಥಾನಮಾನವಿದೆ. ಪುಣ್ಯವನ್ನು ಬಯಸಿ ಮೂರು ಸ್ಥಳಗಳಿಗೆ ಪಯಣ ಬೆಳೆಸುವ ಅನುಮತಿಯನ್ನು ಇಸ್ಲಾಮ್ ನೀಡಿದೆ. ಅವುಗಳಲ್ಲಿ ಕಅಬವೂ ಒಂದು. ಎರಡನೆಯದು ಮದೀನದಲ್ಲಿ ಪ್ರವಾದಿ ಮುಹಮ್ಮದ್(ಸ) ನಿರ್ಮಿಸಿದ ಮಸೀದಿ ಮತ್ತು ಮೂರನೆಯದು ಫೆಲೆಸ್ತೀನ್‌ನ ಚಿರ ಪುರಾತನ ಬೈತುಲ್ ಮಕ್ದಿಸ್. ಜಾಗತಿಕ ಮುಸ್ಲಿಮರು ಕಅಬಾದ ದಿಕ್ಕಿಗೆ ಮುಖ ಮಾಡಿ ನಮಾಝ್ ಮಾಡುತ್ತಾರೆ. ಕಅಬಾದ ಪರಿಸರದಲ್ಲಿರುವ ಯಾವೊಂದು ಜೀವಿಯನ್ನೂ ಹಿಂಸಿಸಬಾರದು. ಅಲ್ಲಾಹನು ಯುದ್ಧ ನಿಷಿದ್ಧಗೊಳಿಸಿದ ತಿಂಗಳುಗಳಲ್ಲೊಂದಾಗಿರುವ ದುಲ್‌ಹಜ್ಜ್‌ನಲ್ಲಿಯೇ ಹಜ್ಜ್ ಕರ್ಮವನ್ನು ನಿಗದಿ ಪಡಿಸಿರುವುದು ಗಮನಾರ್ಹವಾಗಿದೆ. ಜಗತ್ತಿನ ಜನರಿಗಾಗಿ ಏಕದೇವವಿಶ್ವಾಸದ ಕೇಂದ್ರವೆಂಬ ನೆಲೆಯಲ್ಲಿ ಪ್ರಥಮವಾಗಿ ನಿರ್ಮಿಸಿದ ಕೇಂದ್ರವೆಂದು ಕುರ್‌ಆನ್‌ನಲ್ಲಿ ಕಅಬಾ ಭವನವನ್ನು ವರ್ಣಿಸಲಾಗಿದೆ. ಇದರಿಂದ ಕಅಬಾದ ಶ್ರೇಷ್ಠತೆಯನ್ನು ಗ್ರಹಿಸಬಹುದು. ಹಜ್ಜ್ ಕರ್ಮದ ಮಹತ್ವವೂ ಇದರಿಂದ ವ್ಯಕ್ತವಾಗುತ್ತದೆ.

ಪ್ರವಾದಿ ಮುಹಮ್ಮದ್‌ರಿಗಿಂತ(ಸ) ಮುಂಚೆಯೇ ಅರಬರು ಹಜ್ಜ್ ನಿರ್ವಹಿಸುತ್ತಿದ್ದರು. ತಮ್ಮ ಪಿತಾಮಹರಾದ ಪ್ರವಾದಿ ಇಬ್ರಾಹೀಮ್ ಮತ್ತು

ಪ್ರವಾದಿ ಇಸ್ಮಾಈಲ್‌ರ(ಅ) ಪರಂಪರೆಯನ್ನು ಉಳಿಸುವ ಕಾಳಜಿಯಿದ್ದರೂ ಹಜ್ಜ್‌ನ ಸ್ಫೂರ್ತಿಗೆ ತೀರಾ ವಿರುದ್ಧವಾದ ಅನೇಕ ಕಂದಾಚಾರಗಳನ್ನು ಅವರು ಅದರಲ್ಲಿ ಸೇರಿಸಿದ್ದರು. ಏಕದೇವವಿಶ್ವಾಸದ ಶಿಕ್ಷಣ ನೀಡಲು ನಿರ್ಮಿಸಲಾದ ಆ ಪವಿತ್ರ ಭವನದಲ್ಲಿ ಅವರು ಅನೇಕ ಮೂರ್ತಿಗಳನ್ನಿರಿಸಿ ಪೂಜಿಸುತ್ತಿದ್ದರು. ಅವುಗಳಲ್ಲಿ ಇಬ್ರಾಹೀಮ್(ಅ) ಮತ್ತು ಇಸ್ಮಾಈಲ್‌ರ(ಅ) ಮೂರ್ತಿಗಳೂ ಇದ್ದುವೆಂಬುದು ವಿಚಿತ್ರ. ಅನಂತರ ಪ್ರವಾದಿ ಮುಹಮ್ಮದ್‌ರು(ಸ) ಕಅಬಾ ಭವನದಿಂದ ಎಲ್ಲ ಮೂರ್ತಿಗಳನ್ನೂ ತೊಲಗಿಸಿದರು.

ಹಜ್ಜ್ ಕರ್ಮವು ಪ್ರವಾದಿ ಇಬ್ರಾಹೀಮ್‌ರ(ಅ) ತ್ಯಾಗೋಜ್ವಲ ಜೀವನದ ಸ್ಮಾರಕವಾಗಿದೆ. ತಾನು ಅತ್ಯಧಿಕ ಪ್ರೀತಿಸುವ ಪುತ್ರ ಇಸ್ಮಾಈಲ್‌ರನ್ನು(ಅ) ಅಲ್ಲಾಹನ ಆಜ್ಞೆಯಂತೆ ಬಲಿ ನೀಡಲು ಇಬ್ರಾಹೀಮ್‌ರು(ಅ) ಸಿದ್ಧರಾದ ಚರಿತ್ರೆಯನ್ನು ನಾವು ತಿಳಿದಿದ್ದೇವೆ. ಅದರ ಸ್ಮಾರಕವಾಗಿ ಹಾಜಿಗಳು ಮಿನಾದಲ್ಲಿಯೂ ಇತರರು ಊರಿನಲ್ಲಿಯೂ ಈದುಲ್ ಅಝ್ಹಾದ ಆಚರಣೆಯೊಂದಿಗೆ 'ಉಳೂಹಿಯತ್' (ಕುರ್ಬಾನಿ) ಅರ್ಥಾತ್ ಪ್ರಾಣಿ ಬಲಿಯನ್ನೂ ನೀಡುತ್ತಾರೆ. ವಸ್ತುತಃ ಆ ಮೂಲಕ ತಮಗೆ ಅತ್ಯಧಿಕ ಪ್ರಿಯವಾಗಿರುವ ಯಾವುದನ್ನೂ ಅಲ್ಲಾಹನಿಗಾಗಿ ಬಲಿಯರ್ಪಿಸಲು ಸಿದ್ಧರೆಂದು ಘೋಷಿಸುತ್ತಾರೆ. ಹಜ್ಜ್‌ನ ಪ್ರತಿಯೊಂದು ಕ್ರಿಯೆಯಲ್ಲಿಯೂ ಇಂತಹ ಹಲವು ಉನ್ನತ ನೀತಿ ಪಾಠವಿದೆ. ಹಜ್ಜ್, ಮುಸ್ಲಿಮರ ಸಂಘಟಿತ ಸ್ವರೂಪವನ್ನೂ ಸಮಾನತೆಯನ್ನೂ ಸಾರುತ್ತದೆ. ಪ್ರತಿಯೊಬ್ಬರಲ್ಲಿಯೂ ಆ ಗುಣಗಳನ್ನು ಬೆಳೆಸಲು ಅದು ಪ್ರಬಲ ಪ್ರೇರಕವಾಗಿದೆ. ಜಗತ್ತಿನ ನಾನಾ ಕಡೆಗಳಿಂದ ಬಂದ ವಿವಿಧ ದೇಶ-ಭಾಷೆ-ವರ್ಣದ ಜನರು ಒಂದೇ ವೇಷವನ್ನು ಧರಿಸಿ ಕರ್ಮಗಳನ್ನು ನಿರ್ವಹಿಸುತ್ತಾರೆ. ಸರಳವಾದ ಬಿಳಿ ವಸ್ತ್ರವೇ ಎಲ್ಲರ ಉಡುಪು. ಒಂದು ಲುಂಗಿ ಮತ್ತು ಶಾಲು ಮಾತ್ರ. ಶ್ರೀಮಂತ-ಬಡವನೆಂಬ ಯಾವ ಬೇಧ ಭಾವವೂ ಇಲ್ಲ. ರಾಜ-ಪ್ರಜೆಯೆಂಬ ವಿಂಗಡನೆಯಿಲ್ಲ. ಎಲ್ಲರೂ ಕೇವಲ ಒಂದೇ ದೇವನ ದಾಸರು. ಹಜ್ಜ್ ಮುಸ್ಲಿಮರ ಜಾಗತಿಕ ಸಮ್ಮೇಳನವಾಗಿದೆ. ಅದು ಜಾಗತಿಕ ಮುಸ್ಲಿಮರೆಲ್ಲರೂ ಒಂದೇ ಸಂಘಟಿತ ಶಕ್ತಿಯೆಂದು ಸಾಬೀತು ಪಡಿಸುತ್ತದೆ.

ನಮಾಝ್, ಝಕಾತ್, ಉಪವಾಸ, ಹಜ್ಜ್ ಇತ್ಯಾದಿ ಎಲ್ಲ ಕರ್ಮಗಳೂ ಮುಸ್ಲಿಮರ ಪರಸ್ಪರ ಸಂಬಂಧವನ್ನೂ ಅವರ ಸಂಘಟಿತ ಪ್ರಜ್ಞೆಯನ್ನೂ ಸುದೃಢಗೊಳಿಸುತ್ತದೆ. ಉಪವಾಸ ಮತ್ತು ಝಕಾತ್‌ಗಳು ಹಸಿದವರ ಮತ್ತು ಬಡವರ ಕುರಿತು ಜ್ಞಾಪಿಸಿ ಅವರಿಗೆ ನೆರವಾಗುವಂತೆ ಪ್ರೇರೇಪಿಸುವ ಉಪಾಧಿಗಳಾಗಿವೆಯೆಂದು ನಾವು ಈ ಹಿಂದೆ ತಿಳಿದೆವು. ದಿನನಿತ್ಯ ಐದು ಬಾರಿಯ ನಮಾಝನ್ನು ನಾವು ಸಂಘಟಿತವಾಗಿ ನಿರ್ವಹಿಸುತ್ತೇವೆ. ಜಮಾಅತ್ ನಮಾಝಿಗಾಗಿ ಮಸೀದಿಯಲ್ಲಿ ಸೇರುವವರಿಗೆ ಪರಸ್ಪರ ಭೇಟಿಯಾಗಿ ಸಮಸ್ಯೆಗಳನ್ನು ತಿಳಿಯುವ ಅವಕಾಶ ದೊರೆಯುತ್ತದೆ. ವಾರದಲ್ಲೊಮ್ಮೆ ಶುಕ್ರವಾರ ದಿನ ಊರಿನ ಜನರೆಲ್ಲರೂ ಜುಮಾ ಮಸೀದಿಯಲ್ಲಿ ಸೇರುತ್ತಾರೆ. ಅದು ಊರಿನ ಸಾಮಾನ್ಯ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವ ಅವಕಾಶವನ್ನು ಇಮಾಮರಿಗೆ ನೀಡುತ್ತದೆ. ವರ್ಷದಲ್ಲೊಂದು ಬಾರಿ ಜಾಗತಿಕ ಮುಸ್ಲಿಮರ ಪ್ರತಿನಿಧಿಗಳಾಗಿ ಬರುವ ಹಾಜಿಗಳ ಮಹಾ ಸಮ್ಮೇಳನದಲ್ಲಿ ಜಾಗತಿಕ ಮಟ್ಟದಲ್ಲಿ ಮುಸ್ಲಿಮರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ಸೂಚಿಸುವ ಅವಕಾಶ ದೊರೆಯುತ್ತದೆ. ಹೀಗೆ ಹಜ್ಜ್‌ನಿಂದ ಹಾಜಿಗಳು ವೈಯಕ್ತಿಕವಾಗಿ ಆತ್ಮಶುದ್ಧಿ ಸಾಧಿಸುವುದರೊಂದಿಗೆ ಮುಸ್ಲಿಮ್ ಜಗತ್ತಿಗೂ ಅದರಿಂದ ಪ್ರಯೋಜನವಾಗುತ್ತದೆ.

ಹಜ್ಜ್ ನಿರ್ವಹಿಸಿದ ವ್ಯಕ್ತಿಯನ್ನು ಪ್ರವಾದಿಯವರು(ಸ) ಆಗ ತಾನೇ ಹುಟ್ಟಿದ ಮಗುವಿಗೆ ಹೋಲಿಸಿದ್ದಾರೆ. ಅರ್ಥಾತ್ ಎಲ್ಲ ಪಾಪಗಳಿಂದಲೂ ಆತ ಮುಕ್ತನಾಗಿರುತ್ತಾನೆ. ಮಗುವು ಯಾವೊಂದು ತಪ್ಪನ್ನೂ ಮಾಡಿರುವುದಿಲ್ಲವಷ್ಟೇ. ಹಜ್ಜ್‌ನ ಸ್ಫೂರ್ತಿಯನ್ನು ಮೈಗೂಡಿಸಿ ಆ ಕರ್ಮವನ್ನು ನಿರ್ವಹಿಸುವವರಿಗೆ ಅನಂತರ ತಪ್ಪು ಮಾಡಲು ಸಾಧ್ಯವಿಲ್ಲವೆಂದರ್ಥ. ಒಬ್ಬರು ಹಜ್ಜ್‌ಗೆ ಹೋಗ ಬಯಸಿದರೆ ಬಂಧು ಮಿತ್ರಾದಿಗಳನ್ನು ಭೇಟಿಯಾಗಿ, ಅವರ ಹಕ್ಕುಗಳನ್ನು ಸಂದಾಯ ಮಾಡಿ, ಏನಾದರೂ ತಪ್ಪು ಸಂಭವಿಸಿದ್ದರೆ ಕ್ಷಮೆ ಕೋರುತ್ತಾರೆ. ಈ ದೃಶ್ಯವು ಇತರರಿಗೆ ಅಲ್ಲಾಹ್ ಮತ್ತು ಪರಲೋಕದ ಬಗ್ಗೆ ಜ್ಞಾಪಿಸಲು ಪ್ರೇರಕವಾಗುತ್ತದೆ. ಆತನ ಉತ್ತಮ ಜೀವನವು ಮುಸ್ಲಿಮೇತರರಲ್ಲಿ ಇಸ್ಲಾಮಿನೊಂದಿಗೆ ಗೌರವವನ್ನೂ ಇಸ್ಲಾಮಿನ ಬಗ್ಗೆ ಕಲಿಯುವ ಆಸಕ್ತಿಯನ್ನೂ ಮೂಡಿಸುತ್ತದೆ. ಮುಸ್ಲಿಮರಲ್ಲಿ ಧರ್ಮದ ಒಲವು

ಮತ್ತು ತ್ಯಾಗ ಮನೋಭಾವವನ್ನು ಹೆಚ್ಚಿಸುತ್ತದೆ. ಹೀಗೆ ಹಜ್ಜ್‌ನಿಂದ ವ್ಯಕ್ತಿಗಳಿಗೂ ಸಮುದಾಯಕ್ಕೂ ಅನೇಕ ಆಧ್ಯಾತ್ಮಿಕ ಮತ್ತು ಲೌಕಿಕ ಫಲಗಳು ದೊರೆಯುತ್ತವೆ.

ಮಾದರಿ ಪ್ರಶ್ನೆಗಳು

1. ಇಸ್ಲಾಮಿನ ಐದು ಕಂಬಗಳನ್ನು ಸೂಚಿಸುವ ಪ್ರವಾದಿವಚನವನ್ನು ಅರ್ಥ ಸಹಿತ ಬರೆಯಿರಿ.
2. ನಮಾಝ್‌ಗೆ ಇಸ್ಲಾಮಿನಲ್ಲಿ ಅತಿ ಪ್ರಾಮುಖ್ಯವಿರಲು ಕಾರಣವೇನು?
3. 'ಆದಾಬುಸ್ಸಲಾತ್' ಎಂದರೇನು? ಅವು ಯಾವುವು?
4. 'ಝಕಾತ್'ನ ಭಾಷಾರ್ಥವೇನು?
5. 'ಝಕಾತ್' ಶ್ರೀಮಂತರು ನೀಡುವ ಭಿಕ್ಷೆಯೇ?
6. 'ಝಕಾತ್'ನ ಉದ್ದೇಶವನ್ನು ವಿವರಿಸಿರಿ.
7. 'ತಕ್ವಾ' ಎಂದರೇನು?
8. ಇತರ ಆರಾಧನಾ ಕರ್ಮಗಳಿಗಿಂತ ಉಪವಾಸದ ವೈಶಿಷ್ಟ್ಯವೇನು?
9. ಸಾವಿರ ತಿಂಗಳಿಗಿಂತ ಶ್ರೇಷ್ಠವಾದ ರಮಝಾನ್‌ನ ರಾತ್ರಿಯ ಹೆಸರೇನು?
10. ಪುಣ್ಯ ಬಯಸಿ ಪಯಣಿಸಲು ಇಸ್ಲಾಮ್ ಅನುಮತಿಸಿರುವ ಮಸೀದಿಗಳು ಯಾವುವು?
11. ಹಜ್ಜ್ ನಿರ್ವಹಿಸಿದ ವ್ಯಕ್ತಿಯು ಆಗತಾನೇ ಹುಟ್ಟಿದ ಮಗುವಿನಂತೆ ಎಂಬ ಪ್ರವಾದಿ ವಚನದ ತಾತ್ಪರ್ಯವೇನು?

❋ ❋ ❋

ಪಾಠ 4

ಈಮಾನ್

ಇಸ್ಲಾಮಿನ ಐದು ಕಂಬಗಳ ಕುರಿತು ನೀವು ಕಲಿತಿರಿ. ಒಂದು ಕಟ್ಟಡದ ಕಂಬಗಳು ಸುದೃಢವಾಗಿ ನಿಲ್ಲಬೇಕಾದರೆ ಅದಕ್ಕೆ ಭದ್ರವಾದ ಬುನಾದಿಬೇಕು. ಆ ಬುನಾದಿಯೇ 'ಈಮಾನ್.' 'ತಸ್ದೀಕ್' ಅರ್ಥಾತ್ 'ಸತ್ಯವನ್ನು ಅಂಗೀಕರಿಸುವುದು' ಎಂಬುದು 'ಈಮಾನ್'ನ ಭಾಷಾರ್ಥ. ಒಂದು ವಿಷಯವನ್ನು ಗ್ರಹಿಸಿ ಅದರಲ್ಲಿ ಸಂಪೂರ್ಣವಾಗಿ ದೃಢ ವಿಶ್ವಾಸವಿರಿಸುವುದು, ಅದರ ವಿರುದ್ಧವಾಗಿ ಏನನ್ನೂ ಎಂದೂ ಒಪ್ಪದಿರುವುದು- ಇದು ಈಮಾನ್‌ನ ಉದ್ದೇಶ. ಅಲ್ಲಾಹನಲ್ಲಿ ವಿಶ್ವಾಸ, ದೇವಚರರಲ್ಲಿ ವಿಶ್ವಾಸ, ವೇದಗ್ರಂಥಗಳಲ್ಲಿ ವಿಶ್ವಾಸ, ಎಲ್ಲ ಪ್ರವಾದಿಗಳಲ್ಲಿ ವಿಶ್ವಾಸ, ಪರಲೋಕದಲ್ಲಿ ವಿಶ್ವಾಸ, ಖದ್ರ್‌ನಲ್ಲಿ ವಿಶ್ವಾಸ ಎಂಬೀ ವಿಶ್ವಾಸ ಕಾರ್ಯಗಳನ್ನು ನೀವು ಸಂಕ್ಷಿಪ್ತವಾಗಿ ಕಲಿತಿದ್ದೀರಿ. ಈಮಾನಿನ ವಿವಿಧ ಅಂಶಗಳು ಯಾವುವು ಎಂಬುದನ್ನು ಇಲ್ಲಿ ಪರಿಶೀಲಿಸೋಣ.

ಮೇಲೆ ಹೇಳಿದ ಆರು ವಿಷಯಗಳು ಮಾತ್ರ ಈಮಾನ್ ಎಂದು ಭಾವಿಸಬೇಡಿರಿ. ಅದರ ವ್ಯಾಪ್ತಿಯು ಬಹಳ ವಿಶಾಲವಾಗಿದೆ. ಮೇಲೆ ಹೇಳಿರುವ ಅಂಶಗಳು ಈಮಾನಿನ ಮೂಲಭೂತ ವಿಷಯಗಳಾಗಿವೆ. ಅವುಗಳ ಹೊರತು ಈಮಾನಿಗೆ ಅನೇಕ ಶಾಖೆಗಳಿವೆ. ಪ್ರವಾದಿವಚನದಲ್ಲಿ ಈ ವಾಸ್ತವಿಕತೆಯನ್ನು ಹೀಗೆ ಸ್ಪಷ್ಟ ಪಡಿಸಲಾಗಿದೆ.

الايمان بضع وسبعون شعبة ، فأفضلها قول لا اله الا الله
وأدناها إماطة الأذى عن الطريق والحياء شعبة من الايمان

(بخاری، مسلم)

"ವಿಶ್ವಾಸಕ್ಕೆ 70ಕ್ಕೂ ಅಧಿಕ ಶಾಖೆಗಳಿವೆ. ಅಲ್ಲಾಹನಲ್ಲದೇ ಅನ್ಯ ಆರಾಧ್ಯನಿಲ್ಲವೆಂಬ ಸತ್ಯಸಾಕ್ಷ್ಯ ವಚನವು ಅದರಲ್ಲಿ ಅತಿ ಶ್ರೇಷ್ಠವಾಗಿದೆ. ದಾರಿಯಿಂದ ಉಪದ್ರವವನ್ನು ತೊಲಗಿಸುವುದು ಅತಿ ಕೊನೆಯದ್ದಾಗಿದೆ. ಲಜ್ಜೆಯು ಈಮಾನಿನ ಒಂದು ಶಾಖೆಯಾಗಿದೆ." (ಬುಖಾರಿ-ಮುಸ್ಲಿಮ್)

ಈ ಹದೀಸ್‌ನಲ್ಲಿ ಪ್ರವಾದಿಯವರು(ಸ) ಹಾದಿಯಿಂದ ಹಾನಿಕಾರಕ ವಸ್ತುಗಳನ್ನು ತೊಲಗಿಸುವುದನ್ನೂ ಲಜ್ಜೆಯನ್ನೂ ಈಮಾನ್‌ನ ಶಾಖೆಗಳಲ್ಲಿ ಸೇರಿಸಿದ್ದಾರೆ. ಈಮಾನ್ ಎಷ್ಟೊಂದು ವಿಶಾಲವೆಂದು ಈ ಹದೀಸ್ ಸೂಚಿಸುತ್ತದೆ. ವಸ್ತುತಃ ಈಮಾನ್ ಜೀವನವನ್ನು ಸಮಗ್ರವಾಗಿ ವ್ಯಾಪಿಸಿ ಕೊಂಡಿದೆ. ಒಬ್ಬರು ಸತ್ಯವಿಶ್ವಾಸಿಯಾಗುವುದರಿಂದ ಅವರ ಜೀವನವು ಸಂಪೂರ್ಣವಾಗಿ ಆ ವಿಶ್ವಾಸದ ಪ್ರಕಾಶದಿಂದ ಬೆಳಗುತ್ತದೆಯೆಂದರ್ಥ. ಅವರ ಗುಣ ನಡತೆಗಳಲ್ಲಿಯೂ ಅದು ಪ್ರತಿಬಿಂಬಿಸುತ್ತದೆ.

ಪದಗಳ ಅರ್ಥವನ್ನು ಗಮನಿಸುವಾಗ ಈಮಾನ್ ಮತ್ತು ಇಸ್ಲಾಮ್ ವಿಭಿನ್ನವಾಗಿದ್ದರೂ ಅವೆರಡಕ್ಕೂ ಬಹಳಷ್ಟು ಸಂಬಂಧವಿದೆಯೆಂದು ವ್ಯಕ್ತವಾಗುತ್ತದೆ. ಒಬ್ಬನು ಸರಿಯಾದ ಮೂಮಿನ್ (ಸತ್ಯವಿಶ್ವಾಸಿ) ಆಗಬೇಕಿದ್ದರೆ ಅವನು ಸರಿಯಾದ ಮುಸ್ಲಿಮನಾಗಿರಬೇಕು. ಹಾಗೆಯೇ ನೈಜ ಮುಸ್ಲಿಮನಾಗಬೇಕಿದ್ದರೆ ಸರಿಯಾದ ಮೂಮಿನ್ ಆಗಿರಬೇಕು. ಈಮಾನ್‌ನ ಸಂಬಂಧವು ಹೃದಯದೊಂದಿಗಿದ್ದರೆ ಇಸ್ಲಾಮ್‌ನ ಸಂಬಂಧವು ಕರ್ಮದೊಂದಿಗಿದೆ. ಇದು ಅವುಗಳ ಪರಸ್ಪರ ವ್ಯತ್ಯಾಸವಾಗಿದೆ. ಕೇವಲ ಹಕ್ಕು ಸ್ಥಾಪನೆಯಿಂದ ಯಾರೂ ನಿಜವಾದ ಮುಸ್ಲಿಮ್ ಅಥವಾ ಮೂಮಿನ್ ಆಗುವುದಿಲ್ಲ. ಬಾಹ್ಯವಾಗಿ ಸತ್ಕರ್ಮವೆಂದು ಪರಿಗಣಿಸಲ್ಪಡುವ ಯಾವುದನ್ನೂ ಈಮಾನಿಲ್ಲದೆ ನಿರ್ವಹಿಸಿದರೆ ಅದು ಅಲ್ಲಾಹನ ಬಳಿ ಸ್ವೀಕಾರಾರ್ಹವಾಗಲಾರದು. ದಾನ ಧರ್ಮಗಳು ಸ್ವಯಂ ಸತ್ಕಾರ್ಯವೆಂಬುದರಲ್ಲಿ ಸಂದೇಹವಿಲ್ಲ. ಒಬ್ಬನು ಅಲ್ಲಾಹನಲ್ಲಿ ವಿಶ್ವಾಸವಿರಿಸದೆ ಅಥವಾ ಆತನ ಸಂಪ್ರೀತಿಯನ್ನು ಬಯಸದೆ ತನ್ನ ಖ್ಯಾತಿ ಮತ್ತು ಆತ್ಮ ಸಂತೃಪ್ತಿಗಾಗಿ ಮಾತ್ರ ಮಾಡಿದರೆ ಅಲ್ಲಾಹನ ಬಳಿ ಆ ಕರ್ಮಕ್ಕೆ ಯಾವೊಂದು ಪ್ರತಿಫಲವೂ ದೊರೆಯಲಾರದು. ಈಮಾನ್ ಎಂಬ ಭದ್ರ ಬುನಾದಿಯಿಲ್ಲದಿದ್ದರೆ ಇಸ್ಲಾಮ್. ಎಂಬ ಕಟ್ಟಡದ ಕಂಬಗಳು ಸುದೃಢವಾಗಿ ನಿಲ್ಲಲಾರದು.

'ಅಮಲೆ ಸಾಲಿಹ್' ಅರ್ಥಾತ್ ಸತ್ಕರ್ಮವು ಈಮಾನ್‌ನ ಪರಿಪೂರ್ಣತೆಗೆ ಅವಶ್ಯಕ ಉಪಾಧಿಯಾಗಿದೆ. ಆದ್ದರಿಂದಲೇ ಕುರ್‌ಆನ್ ಈಮಾನನ್ನು ಪ್ರಸ್ತಾಪಿಸಿದ

ಕೂಡಲೇ 'ಅಮಲೆಸಾಲಿಹ'ನ್ನೂ ಪ್ರಸ್ತಾಪಿಸಿದೆ. ಇಸ್ಲಾಮಿನ ದೃಷ್ಟಿಯಲ್ಲಿ ಎರಡು ಕಡ್ಡಾಯ ಶರ್ತಗಳ ಆಧಾರದಲ್ಲಿ ಯಾವುದೇ ವಿಷಯವು ಸತ್ಕರ್ಮವೆಂದು ಪರಿಗಣಿಸಲ್ಪಡುತ್ತದೆ. 1. ಆ ಕರ್ಮವು ಅಲ್ಲಾಹನ ನಿಯಮ ನಿರ್ದೇಶಗಳನ್ವಯ ವಾಗಿರಬೇಕು. 2. ಕೇವಲ ಅಲ್ಲಾಹನ ಪ್ರೀತಿಯನ್ನು ಮಾತ್ರ ಬಯಸಿ ನಿರ್ವಹಿಸಬೇಕು. ಇಂತಹ ಎಲ್ಲ ಕರ್ಮಗಳೂ ಇಸ್ಲಾಮ್‌ನಲ್ಲಿ ಸತ್ಕರ್ಮಗಳಾಗಿವೆ. ಒಬ್ಬರು ವ್ಯಾಪಾರ ಅಥವಾ ಬೇಸಾಯ ಮಾಡುತ್ತಿದ್ದಾರೆಂದು ಭಾವಿಸಿರಿ. ಧರ್ಮದಲ್ಲಿ ನಿಷೇಧಿಸಿರುವ ಕಳ್ಳದಾಸ್ತಾನು, ಕಾಳಸಂತೆ ನಡೆಸದೆ ಹಲಾಲ್ ರೀತಿಯಲ್ಲಿ ಅದನ್ನು ನಡೆಸಿದರೆ ಅದೊಂದು ಸತ್ಕರ್ಮವಾಗುವುದು. ಇನ್ನು ಉದ್ಯೋಗ ಅಥವಾ ಆಡಳಿತ ನಡೆಸುತ್ತಾರೆಂದಿರಲಿ- ಭ್ರಷ್ಟಾಚಾರವೆಸಗದೆ ಅಲ್ಲಾಹನು ಆಜ್ಞಾಪಿಸಿದಂತೆ ನ್ಯಾಯೋಚಿತವಾಗಿ ಅವರು ತನ್ನ ಹೊಣೆಯನ್ನು ನಿರ್ವಹಿಸಿದರೆ ಅದು ಕೂಡಾ ಸತ್ಕರ್ಮವಾಗುತ್ತದೆ. ಒಟ್ಟಿನಲ್ಲಿ, ಸತ್ಕರ್ಮಕ್ಕೆ ಇಸ್ಲಾಮಿನಲ್ಲಿ ಬಹಳ ವಿಶಾಲವಾದ ಅರ್ಥಗಳಿವೆ. ಅದು ಇತರ ಧರ್ಮಗಳಂತೆ ಕೇವಲ ಕೆಲವು ಪೂಜಾಮಂತ್ರ ಅಥವಾ ಆರಾಧನಾ ಕ್ರಿಯೆಯಲ್ಲ. ಅಲ್ಲಾಹನ ತೃಪ್ತಿಯನ್ನು ಬಯಸಿ ಆತನ ನಿಯಮ ನಿರ್ದೇಶಗಳನ್ನು ಪಾಲಿಸಿ ಮಾಡುವ ಎಲ್ಲ ಕರ್ಮವೂ ಪುಣ್ಯವೇ ಆಗಿದೆ. ಹೀಗೆ ಜೀವನವನ್ನೇ ಸತ್ಕರ್ಮಗೊಳಿಸಲು ಇಸ್ಲಾಮ್ ಆದೇಶಿಸಿದೆ. ಅದೇ ವೇಳೆ ಮೇಲೆ ಹೇಳಿದ ಉಪಾಧಿಗಳನ್ನು ಪಾಲಿಸದಿದ್ದರೆ, ಬಾಹ್ಯವಾಗಿ ಪುಣ್ಯಕರ್ಮವೆಂದು ಭಾಸವಾದರೂ ಇಸ್ಲಾಮಿನ ದೃಷ್ಟಿಯಲ್ಲಿ ಅದು ಪುಣ್ಯಕರ್ಮವಾಗಿರಲಾರದು. ಉಪವಾಸವೂ ಒಂದು ಪುಣ್ಯ ಕಾರ್ಯವಾಗಿದೆಯಷ್ಟೆ? ಆದರೆ ಒಬ್ಬರು ಹಬ್ಬದ (ಈದ್) ದಿನ ಉಪವಾಸ ಆಚರಿಸುತ್ತಿರುವರೆಂದು ಭಾವಿಸೋಣ. ಹಾಗಾದರೆ ಅದನ್ನು ಅಲ್ಲಾಹನು ಪುಣ್ಯದ ಬದಲಾಗಿ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುತ್ತಾನೆ. ಏಕೆಂದರೆ, ಹಬ್ಬದ ದಿನಗಳಲ್ಲಿ ಉಪವಾಸ ಆಚರಿಸ ಬಾರದೆಂಬುದು ಧರ್ಮದ ಆಜ್ಞೆ. ಉಪವಾಸವಿದ್ದು ಆತ ಆ ಆಜ್ಞೆಯನ್ನು ಉಲ್ಲಂಘಿಸಿದ್ದಾನೆ. ಓರ್ವ ನೈಜ ಮುಸ್ಲಿಮನು ಹಾಗೆ ಮಾಡಲಾರನು. ಆದ್ದರಿಂದ ನಮ್ಮ ಈಮಾನ್ ಪರಿಪೂರ್ಣವಾಗಬೇಕಿದ್ದರೆ ನಾವು ಪುಣ್ಯ ಕರ್ಮಗಳನ್ನು ಮಾತ್ರ ಮಾಡಿದರೆ ಸಾಲದು,

ಅವು ಅಲ್ಲಾಹನ ತೃಪ್ತಿ ಮತ್ತು ಆಜ್ಞಾನುಸಾರವಾಗಿಯೂ ಇರಬೇಕು.

ಅಲ್ಲಾಹ್ ಮತ್ತು ಪರಲೋಕದ ನೈಜ ವಿಶ್ವಾಸವಿದ್ದರೆ ವ್ಯಕ್ತಿ ಮತ್ತು ಸಮಾಜದಲ್ಲಿ ಅದರಿಂದಾಗಿ ಭಾರೀ ಬದಲಾವಣೆಯುಂಟಾಗುತ್ತದೆ; ಅಲ್ಲಾಹನಲ್ಲಿ ವಿಶ್ವಾಸವಿರಿಸುವಾತನು ಜಗತ್ತಿನ ಬೇರೆ ಯಾವ ಶಕ್ತಿಗೂ ಹೆದರಲಾರನು. ಏಕೆಂದರೆ ಸರ್ವಶಕ್ತನಾದ ದೇವನು ತನ್ನ ಜತೆಗಿರುವನೆಂದು ಆತ ನಂಬುತ್ತಾನೆ. ನ್ಯಾಯ ನಿಷ್ಠೆಯುಳ್ಳವನಾಗಿರುತ್ತಾನೆ. ಕಷ್ಟ ಕೋಟಲೆಗಳು ಬಂದರೆ ದಿಗ್ಭ್ರಮೆಗೊಳ್ಳುವುದಿಲ್ಲ. ಆತ ನಿರಾಶನಾಗುವುದಿಲ್ಲ. ಸಹಜೀವಿಗಳೊಡನೆ ಸಹಾನುಭೂತಿಯನ್ನು ಹೊಂದಿರುತ್ತಾನೆ, ಇರುವುದರಲ್ಲಿ ಸಂತೃಪ್ತನಾಗಿರುತ್ತಾನೆ. ಮರ್ದಿತರಿಗೆ ಸಹಾಯ ಮಾಡುತ್ತಾನೆ. ಸತ್ಯ ಮತ್ತು ಧರ್ಮದ ವೈರಿಗಳ ವಿರುದ್ಧ ವಿಚಲಿತನಾಗದೆ ಹೋರಾಡುತ್ತಾನೆ. "ನೀವು ಲಾಇಲಾಹ ಇಲ್ಲಲ್ಲಾಹ್ ಎಂದು ಹೇಳಿರಿ. ಅರಬರೂ ಅರಬೇತರರೂ ನಿಮ್ಮ ಅಧೀನರಾಗುತ್ತಾರೆ" ಎಂದು ಪ್ರವಾದಿ(ಸ) ಒಮ್ಮೆ ಹೇಳಿದ್ದರು. ಪ್ರವಾದಿಯವರ(ಸ) ನಿಧನಾ ನಂತರ ಅನೇಕ ದೇಶಗಳು ಪ್ರವಾದಿಯವರ(ಸ) ಅನುಚರರ ಅಧೀನವಾಯಿತೆಂದು ಇತಿಹಾಸದಲ್ಲಿ ಕಂಡು ಬರುತ್ತದೆ. ಅವರ ದೃಢ ವಿಶ್ವಾಸವೇ ಅದಕ್ಕೆ ಕಾರಣವಾಗಿತ್ತು.

ಮಾದರೀ ಪ್ರಶ್ನೆಗಳು

1. 'ಈಮಾನ್'ನ ಭಾಷಾರ್ಥ ಮತ್ತು ತಾತ್ಪರ್ಯವೇನು?
2. 'ಈಮಾನ್'ನ ಪರಿಪೂರ್ಣತೆಗೆ ಅವಶ್ಯಕ ಉಪಾಧಿ ಯಾವುದು?
3. ಸತ್ಕರ್ಮದ ಎರಡು ಉಪಾಧಿಗಳು ಯಾವುವು?
4. ಹಬ್ಬದ (ಈದ್) ದಿನ ಉಪವಾಸ ಆಚರಿಸುವುದು ಪುಣ್ಯಕರ್ಮವಾಗುವುದಿಲ್ಲವೇಕೆ?
5. 'ಈಮಾನ್'ನ ಅತ್ಯುನ್ನತ ಮತ್ತು ಅತೀ ಕೊನೆಯ ಶಾಖೆ ಯಾವುದು?

❋ ❋ ❋

ಪಾಠ 5

ತೌಹೀದ್

لا اله الا الله 'ಲಾಇಲಾಹ ಇಲ್ಲಲ್ಲಾಹ್' (ಅಲ್ಲಾಹನಲ್ಲದೇ ಅನ್ಯ ಆರಾಧ್ಯನಿಲ್ಲ) ಇದು ಇಸ್ಲಾಮಿನ ಮೂಲ ವಿಶ್ವಾಸ ಸಿದ್ಧಾಂತವೆಂದು ನೀವು ಕಲಿತಿರುವಿರಷ್ಟೆ. ಇಸ್ಲಾಮಿನ ಸಾಂಕೇತಿಕ ಭಾಷೆಯಲ್ಲಿ ಇದನ್ನು 'ತೌಹೀದ್' ಅಥವಾ ಏಕದೇವ ಸಿದ್ಧಾಂತವೆನ್ನಲಾಗುತ್ತದೆ. ಅಲ್ಲಾಹನು ಇದ್ದಾನೆಂದು ಮಾತ್ರ ನಂಬಿದರೆ ಸಾಲದು, ಆತನು ಏಕನೆಂದೂ ನಂಬಬೇಕು. ಕೇವಲ ಆತನನ್ನೇ ಆರಾಧಿಸಬೇಕು, ಅನುಸರಿಸಬೇಕು. ಎಲ್ಲ ಚಟುವಟಿಕೆಗಳಲ್ಲಿಯೂ ಆತನ ಪ್ರೀತಿಯನ್ನೇ ಬಯಸಬೇಕು. ಇದು 'ತೌಹೀದ್'ನ ತಾತ್ಪರ್ಯ. 'ತೌಹೀದ್' ಎಂಬ ಮಾತೇ ಬಹಳ ಅರ್ಥ ಗರ್ಭಿತವಾಗಿದೆ. ಅದಕ್ಕೆ ಏಕಗೊಳಿಸು, ಏಕೀಕರಿಸು ಇತ್ಯಾದಿ ಅರ್ಥಗಳಿವೆ. ಅದು ಮಾನವರ ಮಧ್ಯೆಯೂ ಮಾನವ ಮತ್ತು ಪ್ರಪಂಚದ ಮಧ್ಯೆಯೂ ಏಕೀಭಾವವನ್ನು ನಿರ್ಮಿಸುವ ವಿಶ್ವಾಸ ಸಿದ್ಧಾಂತವಾಗಿದೆ. ಈ ವಿಶ್ವಾಸ ಸಿದ್ಧಾಂತದ ಅಂಗೀಕಾರದಿಂದ ಪ್ರಪಂಚದಲ್ಲಿ ಮಾನವನಿಗೆ ನೈಜ ಸ್ಥಾನ ದೊರೆಯುತ್ತದೆ.

ಆ ಮೂಲಕ ತನ್ನ ಸೃಷ್ಟಿಕರ್ತನಾದ ಅಲ್ಲಾಹ್ ಮತ್ತು ತಾನು ಬದುಕುವ ಪ್ರಪಂಚ ಹಾಗೂ ಸಹಜೀವಿಗಳೊಂದಿಗೆ ನೈಜ ಸಂಬಂಧ ಸ್ಥಾಪಿಸಲು ಮಾನವನಿಗೆ ಸಾಧ್ಯವಾಗುತ್ತದೆ. ಆ ಮೂಲಕ ಮಾನವೀಯ ಸಹೋದರತೆಯು ಸಫಲವಾಗುತ್ತದೆ.

'ತೌಹೀದ್'ನಲ್ಲಿ ಎರಡು ಅಂಶಗಳಿವೆ. 'لا مَعْبُودَ إِلَّا الله' ಎಂಬುದು ಅವುಗಳಲ್ಲೊಂದು. ಅಲ್ಲಾಹನಲ್ಲದೇ 'ಮಅ್‌ಬೂದ್' ಇಲ್ಲವೆಂದರ್ಥ. 'لا مَقْصُودَ إِلَّا الله' ಅಲ್ಲಾಹನಲ್ಲದೇ ಗುರಿಯಿಲ್ಲ, ಇದು ಎರಡನೇಯ ಅಂಶ. ಕೇವಲ ಅಲ್ಲಾಹನ ಪ್ರೀತಿಯೇ ನಮ್ಮ ಧ್ಯೇಯವೆಂದರ್ಥ. ನಾವು ನಮಾಝ್, ಉಪವಾಸ ಮುಂತಾದ ಆರಾಧನೆ ಮತ್ತಿತರ ಸತ್ಕರ್ಮಗಳನ್ನು ಅಲ್ಲಾಹನ ಸಂಪ್ರೀತಿಯ ಬಯಕೆಯಿಂದಲೇ ಮಾಡಬೇಕು. ನಮ್ಮ ಪೋಷಕರಿಗೆ ಹೆದರಿ ಅಥವಾ

ಇತರರ ಮೆಚ್ಚುಗೆಯನ್ನು ಬಯಸಿ ಮಾಡಬಾರದು. ಹಾಗೆ ಮಾಡಿದರೆ ನಾವು 'ತೌಹೀದ್'ನ ಹಾದಿಯಿಂದ ಬೇರೆ ಯಾಗುವೆವು.

'ತೌಹೀದ'ನ್ನು ವಿದ್ವಾಂಸರು ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ.

1. ತೌಹೀದುರ್ರುಬೂಬಿಯ್ಯತ್.
2. ತೌಹೀದುಲ್ ಉಲೂಹಿಯ್ಯತ್
3. ತೌಹೀದುಸ್ಸಿಫಾತ್.

ತೌಹೀದುರ್ರುಬೂಬಿಯ್ಯತ್

ಕೇವಲ ಅಲ್ಲಾಹನೇ ಪ್ರಪಂಚ ಮತ್ತು ಅದರ ಸಕಲ ಚರಾಚರಗಳ ಸೃಷ್ಟಿಕರ್ತ **(خالق)** ಪರಿಪಾಲಕ **(ربّ)** ಆತನ ಕ್ರಿಯೆಗಳಲ್ಲಿ **(أفعال)** ಇತರ ಸಹಭಾಗಿಗಳಿಲ್ಲ. ಈ ವಿಶ್ವಾಸವನ್ನು 'ತೌಹೀದುರ್ರುಬೂಬಿಯ್ಯತ್' ಎನ್ನಲಾಗುತ್ತದೆ.

ಈ ಜಗತ್ತು ಸ್ವಯಂ ನಿರ್ಮಾಣವಾದುದಲ್ಲ. ಅದನ್ನು ಸೃಷ್ಟಿಸಿ ನಿಯಂತ್ರಿಸುತ್ತಿರುವ ಓರ್ವ ದೇವನಿದ್ದಾನೆ ಎಂಬ ವಿಷಯವನ್ನು ಬಹುತೇಕ ಜನರು ಎಲ್ಲ ಕಾಲಗಳಲ್ಲಿಯೂ ಅಂಗೀಕರಿಸಿದ್ದಾರೆ. ಇದು ಎಲ್ಲ ಧರ್ಮಗಳೂ ಒಪ್ಪುವ ಸತ್ಯ. ಜಗತ್ತಿಗೆ ಸೃಷ್ಟಿಕರ್ತ ಮತ್ತು ಪರಿಪಾಲಕನಾದ ಓರ್ವ ದೇವನಿದ್ದಾನೆಂಬುದನ್ನು ನಿಷೇಧಿಸಿದವರು ತೀರಾ ಕಡಿಮೆ. ಅವರ ಈ ಧೋರಣೆಗೆ ಯಾವುದೇ ನ್ಯಾಯ ಅಥವಾ ಆಧಾರವಿಲ್ಲವೆಂದು ನಾವು ಹಿಂದೆ ಕಲಿತಿದ್ದೇವೆ. ಆದರೆ ಕೇವಲ ಅಲ್ಲಾಹನಿದ್ದಾನೆಂಬ ವಿಶ್ವಾಸವಿರಿಸುವುದರಿಂದ 'ತೌಹೀದ್'ನ ಬೇಡಿಕೆ ಈಡೇರುವುದಿಲ್ಲ. ಈ ರೀತಿಯ 'ತೌಹೀದುರ್ರುಬೂಬಿಯ್ಯತ್ತ'ನ್ನು ಪ್ರವಾದಿಯವರ(ಸ) ಕಾಲದ ಮಕ್ಕಾದ ಮುಶ್ರಿಕರು ಅಂಗೀಕರಿಸಿದ್ದರು. ಪವಿತ್ರ ಕುರ್‌ಆನ್‌ನಲ್ಲಿ ಹೀಗಿದೆ:

ولئن سألتهم من خلق السموات والارض ليقولن خلقهن
العزيز العليم (الزخرف: ٩)

"ಭೂಮಿ ಆಕಾಶಗಳನ್ನು ಸೃಷ್ಟಿಸಿದವನಾರೆಂದು ನೀವು ಇವರೊಡನೆ ಕೇಳಿದರೆ,

ಅವುಗಳನ್ನು ಪ್ರಬಲನೂ ಸರ್ವಜ್ಞನೂ ಆದವನು ಸೃಷ್ಟಿಸಿದನೆಂದು ಇವರು ಹೇಳುವರು."

(ಅಝ್ಝುಖ್‌ರುಫ್ :9)

• قل من يرزقكم من السماء والارض أمّن يملك السّمع والأبصار ومن يخرج الحيّ من الميّت ويخرج الميّت من الحيّ ومن يدبر الأمر فسيقولون الله (يونس: ٣١)

"ಅವರೊಡನೆ ಕೇಳಿರಿ ನಿಮಗೆ ಆಕಾಶಗಳಿಂದಲೂ ಭೂಮಿಯಿಂದಲೂ ಜೀವನಾಧಾರ ನೀಡುತ್ತಿರುವವನಾರು? ಈ ಶ್ರವಣ ಮತ್ತು ದೃಕ್ಶಕ್ತಿಗಳು ಯಾರ ವಶದಲ್ಲಿವೆ? ನಿರ್ಜೀವಿಯಿಂದ ಸಜೀವಿಯನ್ನೂ ಸಜೀವಿಯಿಂದ ನಿರ್ಜೀವಿಯನ್ನೂ ಹೊರ ತರುವವನಾರು? ಈ ಜಗತ್ತಿನ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ನಡೆಸುತ್ತಿರುವವನಾರು? ಅಲ್ಲಾಹ್ ಎಂದೇ ಅವರು ಹೇಳುವರು."

ಅಲ್ಲಾಹನು ಸೃಷ್ಟಿಕರ್ತ ಮತ್ತು ಪರಿಪಾಲಕನೆಂದು ನಂಬುವುದರಿಂದ ಮಾತ್ರ 'ತೌಹೀದ್' ಸಂಪೂರ್ಣವಾಗುವುದಿಲ್ಲವೆಂದು ಇದರಿಂದ ವ್ಯಕ್ತವಾಗುತ್ತದೆ. ಅದಕ್ಕೆ 'ತೌಹೀದುರ್ರುಬೂಬಿಯ್ಯತ್'ನೊಂದಿಗೆ 'ತೌಹೀದುಲ್ ಉಲೂಹಿಯ್ಯತ್' ಮತ್ತು 'ತೌಹೀದುಸ್ಸಿಫಾತ್'ನ ಅಗತ್ಯವೂ ಇದೆ.

ತೌಹೀದುಲ್ ಉಲೂಹಿಯ್ಯತ್

ಇನ್ನು 'ತೌಹೀದುಲ್ ಉಲೂಹಿಯ್ಯತ್'ನ ಉದ್ದೇಶವೇನೆಂದು ಪರಿಶೀಲಿಸೋಣ. ಇಬಾದತ್‌ಗೆ ಕೇವಲ ಅಲ್ಲಾಹನೇ ಅರ್ಹನೆಂದು ನಂಬುವುದಕ್ಕೆ 'ತೌಹೀದುಲ್ ಉಲೂಹಿಯ್ಯತ್' ಎನ್ನಲಾಗುತ್ತದೆ. ಆದ್ದರಿಂದ ಇದನ್ನು 'ತೌಹೀದುಲ್ ಇಬಾದತ್' ಎಂದೂ ಹೇಳಬಹುದು. ಎಲ್ಲಾ ಪ್ರವಾದಿಗಳು ಈ ಸಂದೇಶವನ್ನೇ ತಮ್ಮ ಸಮುದಾಯಕ್ಕೆ ನೀಡಿದ್ದರು. ಪವಿತ್ರ ಕುರ್‌ಆನ್‌ನಲ್ಲಿ ಪ್ರವಾದಿಗಳ ಚರಿತ್ರೆಯನ್ನು ವಿವರಿಸಿರುವೆಡೆಗಳಲ್ಲಿ ಅವರ ಸಮುದಾಯಗಳು ಈ ಹಿಂದೆ ಅಂಗೀಕರಿಸಿದ್ದ 'ತೌಹೀದುರ್ರುಬೂಬಿಯ್ಯತ್'ನೊಂದಿಗೆ ಅವರನ್ನು ಆ ಪ್ರವಾದಿಗಳು 'ತೌಹೀದುಲ್

ಇಬಾದತ್'ನೆಡೆಗೆ ಆಹ್ವಾನಿಸಿರುವುದು ಕಂಡು ಬರುತ್ತದೆ. ಇದು ಎಲ್ಲ ಪ್ರವಾದಿಗಳ ಬೋಧನೆಯ ಸಾರವಾಗಿತ್ತು. ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

ولقد بعثنا فى كل أمة رسولا أن اعبدوا الله واجتنبوا الطاغوت (النحل : ٣٦)

"ನಾವು ಪ್ರತಿಯೊಂದು ಸಮುದಾಯದಲ್ಲಿ ಓರ್ವ ಸಂದೇಶವಾಹಕರನ್ನು ಕಳುಹಿಸಿದೆವು ಮತ್ತು ಅಲ್ಲಾಹನ ಇಬಾದತ್ (ದಾಸ್ಯ-ಆರಾಧನೆ) ಮಾಡಿರಿ ಮತ್ತು 'ತಾಗೂತ್'ನ ಇಬಾದತ್‌ನಿಂದ ದೂರವಿರಿ' ಎಂದು ಅವರ ಮುಖಾಂತರ ಎಚ್ಚರಿಕೆ ನೀಡಿದೆವು." (ಅನ್ನಹ್ಲ್:36)

'ಇಬಾದತ್' ಎಂಬ ಪದಕ್ಕೆ ಬಹಳ ವಿಶಾಲವಾದ ಅರ್ಥವಿದೆ! ಆರಾಧನೆ, ಅತ್ಯಂತ ವಿನಮ್ರತೆ ಮತ್ತು ಭಯಭಕ್ತಿ ಪ್ರಕಟಿಸುವುದು, ಬೇಶರತ್ ಅನುಸರಣೆ, ಸಂಪೂರ್ಣ ವಿಧೇಯತೆ ಮತ್ತು ದಾಸ್ಯತನದ ವರ್ತನೆ ಇತ್ಯಾದಿ ಅರ್ಥಗಳಿವೆ. ಮಾನವನು ಅಲ್ಲಾಹನ ಹೊರತು ಆರಾಧ್ಯ ಮತ್ತು ಬೇಶರತ್ ಅನುಸರಣೆಗೆ ಅರ್ಹನಾಗಿ ಅಂಗೀಕರಿಸುವ ಇತರ ದೇವ ವಿರೋಧಿ ಶಕ್ತಿಗಳನ್ನು 'ತಾಗೂತ್' ಎನ್ನಲಾಗುತ್ತದೆ. ಅಲ್ಲಾಹನು ಮೆಚ್ಚುವ ಮತ್ತು ತೃಪ್ತಿಪಡುವ ಮಾತುಗಳು ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷ ಕ್ರಿಯೆಗಳು 'ಇಬಾದತ್'ನಲ್ಲಿ ಸೇರುತ್ತವೆ. "ಮಾನವ ವರ್ಗ ಮತ್ತು ಜಿನ್ನ್ ವರ್ಗವನ್ನು ನನ್ನ 'ಇಬಾದತ್' ಮಾಡಲಿಕ್ಕಾಗಿಯೇ ನಾನು ಸೃಷ್ಟಿಸಿದ್ದೇನೆ" ಎಂದು ಅಲ್ಲಾಹನು ಕುರ್‌ಆನ್‌ನಲ್ಲಿ ಹೇಳಿದ್ದಾನೆ. ಹಾಗಾದರೆ ನಮ್ಮ ಸಂಪೂರ್ಣ ಜೀವನವು 'ಇಬಾದತ್' ಆಗಿರಬೇಕು. ಹಾಗೆಂದರೆ ಇಡೀ ಜೀವನವನ್ನು ನಮಾಝ್, ಉಪವಾಸ ಇತ್ಯಾದಿ ಆರಾಧನಾ ಕರ್ಮಗಳಿಗಾಗಿ ಮೀಸಲಿಡಬೇಕೆಂದರ್ಥವಲ್ಲ. ನಾವು ಏನನ್ನು ಮಾಡುವುದಿದ್ದರೂ ಅದು ಅಲ್ಲಾಹನ ವಿಧಿ-ನಿಷೇಧಗಳಿಗೆ ಬದ್ಧನಾಗಿರಬೇಕು. ಹಾಗೆ ಮಾಡಿದರೆ ನಮ್ಮ ಸಂಪೂರ್ಣ ಜೀವನ

'ಇಬಾದತ್' ಆಗುತ್ತದೆ. 'ತೌಹೀದುಲ್ ಉಲೂಹಿಯ್ಯತ್'ನ ಬೇಡಿಕೆಗಳನ್ನು ಸಂಕ್ಷಿಪ್ತವಾಗಿ ನೋಡೋಣ -

1. ನಮ್ಮ ಜೀವನಾವಶ್ಯಕ ವಸ್ತುಗಳನ್ನು ಅಲ್ಲಾಹನು ಒದಗಿಸಿಕೊಟ್ಟಿದ್ದಾನೆ. ಅಲ್ಲಾಹನ ಅನುಗ್ರಹಗಳಿಗಾಗಿ ಆತನಿಗೆ ನಾವು ಕೃತಜ್ಞತೆ ತೋರಬೇಕು. ನಮ್ಮ ಆರಾಧನೆ ಮತ್ತು ಭಯಭಕ್ತಿ ಪ್ರಕಟನೆಗೆ ಆತನೇ ಅರ್ಹನು. ನಾವು ಭಕ್ತ್ಯಾದರಗಳಿಂದ ಆತನ ಮುಂದೆಯೇ ಕೈಕಟ್ಟಿ ನಿಲ್ಲಬೇಕು. ಆತನ ಮುಂದೆಯೇ ತಲೆ ಬಾಗಬೇಕು ಮತ್ತು ಸಾಷ್ಟಾಂಗವೆರಗಬೇಕು. ಬಲಿ, ಹರಕೆ, ಪ್ರಾರ್ಥನೆ ಇತ್ಯಾದಿ ಎಲ್ಲ ರೀತಿಯ ಆರಾಧನೆಗಳನ್ನು ಆತನಿಗೆ ಮಾತ್ರ ಮಾಡಬೇಕು.

2. ಸೃಷ್ಟಿಗಳೊಡನೆ ಆಜ್ಞಾಪಿಸುವ ಅಧಿಕಾರ ಕೇವಲ ಅಲ್ಲಾಹನಿಗೆ ಮಾತ್ರ. ಆತನ ಆಜ್ಞೆಗಳನ್ನೇ ನಾವು ಅನುಸರಿಸಬೇಕು. ಪ್ರವಾದಿಗಳ ಮೂಲಕ ಅಲ್ಲಾಹನ ಆಜ್ಞೆಗಳು ನಮಗೆ ದೊರೆಯುತ್ತವೆ. ಆದ್ದರಿಂದ ಅಲ್ಲಾಹನ ಪ್ರವಾದಿಯವರನ್ನು ಅನುಸರಿಸುವುದೇ ಅಲ್ಲಾಹನನ್ನು ಅನುಸರಿಸುವ ವ್ಯಾವಹಾರಿಕ ಮಾರ್ಗವಾಗಿದೆ. ವಸ್ತುತಃ ಅಲ್ಲಾಹನೊಂದಿಗಿರುವ ಅನುಸರಣೆಯೇ ಪ್ರವಾದಿಯೊಂದಿಗಿರುವ ಅನುಸರಣೆಯಾಗಿದೆ.

3. ನಾವು ಹೇಗೆ ವರ್ತಿಸಬೇಕು, ಹೇಗೆ ವರ್ತಿಸಬಾರದು. ನಮಗೆ ಧರ್ಮಬದ್ಧ (ಹಲಾಲ್)ಯಾವುದು, ನಿಷಿದ್ಧ (ಹರಾಮ್) ಯಾವುದು, ನ್ಯಾಯ ಮತ್ತು ಅನ್ಯಾಯಗಳು ಯಾವುವು ಇತ್ಯಾದಿ ವಿಷಯಗಳನ್ನು ನಿರ್ಧರಿಸುವ ಅಧಿಕಾರ ಅಲ್ಲಾಹನಿಗೆ ಮಾತ್ರ. ನಮ್ಮ ಜೀವನಕ್ಕೆ ಶಾಸನ ನಿರ್ಮಿಸುವ ಸ್ವತಂತ್ರ ಹಕ್ಕು ಅಲ್ಲಾಹನಿಗಲ್ಲದೆ ಬೇರೆ ಯಾರಿಗೂ ಇಲ್ಲ. ಆ ಹಕ್ಕನ್ನು ಇತರರಿಗೆ ನೀಡುವುದು, ಅಥವಾ ಅದನ್ನು ಸರಿಯೆಂದು ಭಾವಿಸುವುದು ತೌಹೀದ್‌ಗೆ ತೀರಾ ವಿರುದ್ಧವಾಗಿದೆ. ಅಲ್ಲಾಹನ ಕಾನೂನು ಮತ್ತು ಅಲ್ಲಾಹನ ಪ್ರವಾದಿಯವರು ಅದಕ್ಕೆ ನೀಡಿರುವ ವಿವರಣೆಯನ್ವಯ ಮಾತ್ರ ಆಯಾ ಕಾಲದಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ

ಕಾನೂನುಗಳನ್ನು ನಿರ್ಮಿಸುವ ಹಕ್ಕು ಮಾನವನಿಗಿದೆ. ನಮಗೆ ಉಪಕಾರ ಅಥವಾ ಉಪದ್ರವ ಮಾಡಲು ಆತನಿಂದ ಮಾತ್ರ ಸಾಧ್ಯ. ಆತ ಯಾರಿಗಾದರೂ ಹಿತ ಅಥವಾ ಹಾನಿ ಮಾಡಬಯಸಿದರೆ ಅದನ್ನು ತಡೆಯಲು ಜಗತ್ತಿನ ಯಾವ ಶಕ್ತಿಗೂ ಸಾಧ್ಯವಿಲ್ಲ.

ತೌಹೀದುಸ್ಸಿಫಾಅತ್

ಇದು ತೌಹೀದ್‌ನ ಮೂರನೇಯ ವಿಧವಾಗಿದೆ. ಅಸ್ತಿತ್ವದಂತೆಯೇ ತನ್ನ ಗುಣಗಳಲ್ಲಿಯೂ ಅಲ್ಲಾಹನು ಸಾಟಿಯಿಲ್ಲದವನೆಂದು ನಂಬುವುದೇ ಇದರ ತಾತ್ಪರ್ಯ. ಆತನಂತೆ ಬೇರೊಂದು ವಸ್ತುವಿಲ್ಲ. (الشورى) ليس كمثله شيئ ಎಂದು ಕುರ್‌ಆನ್ ಹೇಳಿದೆ. ಪವಿತ್ರ ಕುರ್‌ಆನ್ ಮತ್ತು ಹದೀಸ್‌ನಲ್ಲಿಯೂ ಅಲ್ಲಾಹನ ಅನೇಕ ವಿಶಿಷ್ಟ ಗುಣ ಮತ್ತು ನಾಮಗಳನ್ನು ಪ್ರಸ್ತಾಪಿಸಲಾಗಿದೆ. ಚಿರಂಜೀವಿಯಾದವನು (الحيّ القيوم), ಸರ್ವಶಕ್ತ, (القدير), ಸರ್ವಜ್ಞ, (العليم), ತಂತ್ರಜ್ಞ, (الحكيم), ಸರ್ವ ವೀಕ್ಷಕ (البصير), ಪ್ರತಾಪಶಾಲಿ (العزيز), ಸರ್ವಶ್ರುತ (السميع), ಪರಮದಯಾಮಯನೂ ಕರುಣಾಸಾಗರನೂ (الرحمن الرحيم), ಮಹಿಮಾವಂತ (العظيم), ಸ್ತುತ್ಯರ್ಹ (الحميد) ಪ್ರತ್ಯಕ್ಷ ಮತ್ತು ಪರೋಕ್ಷಗಳನ್ನು ಬಲ್ಲವನು (عالم الغيب والشهادة) ಇತ್ಯಾದಿಗಳು ಅಲ್ಲಾಹನ ವಿಶಿಷ್ಟ ನಾಮಗಳಲ್ಲಿ ಸೇರಿವೆ. ಈ ಗುಣಗಳು ಇತರ ಯಾವೊಂದು ಸೃಷ್ಟಿಗೂ ಇಲ್ಲ. ಇರಲು ಸಾಧ್ಯವೂ ಇಲ್ಲ. ಅಲ್ಲಾಹನ ಜ್ಞಾನ ಮತ್ತು ನಮ್ಮ ಜ್ಞಾನ, ಅಲ್ಲಾಹನ ದೃಷ್ಟಿ ಶಕ್ತಿ ಮತ್ತು ನಮ್ಮ ದೃಷ್ಟಿಶಕ್ತಿಗಳ ನಡುವೆ ಯಾವೊಂದು ಸಾಮ್ಯತೆಯೂ ಇಲ್ಲ. ನಮಗೆ ನೋಡಬೇಕಾದರೆ ಕಣ್ಣು ಎಂಬ ವಿಶೇಷ ಅವಯವ ಬೇಕು. ನಮ್ಮ ದೃಷ್ಟಿಗೆ ಮಿತಿಯಿದೆ. ಹೀಗೆ ಹಲವು ಉಪಾಧಿಗಳಿಗೆ ಅದು ಬದ್ಧವಾಗಿದೆ. ಆದರೆ ಅಲ್ಲಾಹನ ದೃಷ್ಟಿಯು ಅಂತಹ ಯಾವ ಉಪಾಧಿಗೂ ಬದ್ಧವಾಗಿಲ್ಲ. ಹಾಗೆಯೇ ನಮ್ಮ ಜ್ಞಾನಕ್ಕೂ ಮಿತಿಯಿದೆ. ಆದರೆ ಅಲ್ಲಾಹನ ಜ್ಞಾನವು ಸರ್ವವ್ಯಾಪಿಯಾಗಿದೆ. ಅಲ್ಲಾಹನ ಇತರ ವಿಶೇಷತೆಗಳ ಸ್ಥಿತಿಯೂ ಅಷ್ಟೆ.

ಅಲ್ಲಾಹನ ಈ ಗುಣಗಳು, ಇತರ ಯಾವುದಾದರೂ ಸೃಷ್ಟಿಗಳಿಗೆ ಅಥವಾ ಶಕ್ತಿಗಳಿಗೆ ಇದೆಯೆಂಬ ವಿಶ್ವಾಸವು ತೌಹೀದ್‌ಗೆ ವಿರುದ್ಧವಾಗಿದೆ. ತೌಹೀದ್‌ನ ವಿಶ್ವಾಸವು ಸಂಪೂರ್ಣವಾಗಬೇಕಾದರೆ ಹಿಂದೆ ವಿವರಿಸಿದ ಎರಡು ವಿಧದೊಂದಿಗೆ ಅಲ್ಲಾಹನ ಗುಣಗಳಲ್ಲಿರುವ ತೌಹೀದ್‌ನಲ್ಲಿಯೂ ವಿಶ್ವಾಸವಿರಿಸಬೇಕಾದುದು ಅನಿವಾರ್ಯವಾಗಿದೆ. ಅದರ ಹೊರತು ಯಾರಿಗೂ ಮುಸ್ಲಿಮನಾಗಿರಲು ಸಾಧ್ಯವಿಲ್ಲ.

ಮಾದರಿ ಪ್ರಶ್ನೆಗಳು

1. 'ತೌಹೀದ್'ನ ಎರಡು ಅಂಶಗಳು ಯಾವುವು?
2. 'ತೌಹೀದುಲ್ ಉಲೂಹಿಯ್ಯತ್' ಎಂದರೇನು?
3. ಮಕ್ಕಾದ ಮುಶ್ರಿಕರು ಅಲ್ಲಾಹನನ್ನು ಸೃಷ್ಟಿಕರ್ತನೆಂದು ನಂಬುತ್ತಿದ್ದರೆಂದು ಸ್ಪಷ್ಟ ಪಡಿಸುವ ಕುರ್‌ಆನ್ ವಾಕ್ಯವನ್ನು ಉದ್ಧರಿಸಿರಿ?
4. ಸೃಷ್ಟಿಗಳ ಮತ್ತು ಸೃಷ್ಟಿಕರ್ತನ ವೈಶಿಷ್ಟ್ಯಗಳಲ್ಲಿರುವ ಪರಸ್ಪರ ವ್ಯತ್ಯಾಸವೇನು?

* * *

ಪಾಠ 6

ಶಿರ್ಕ್

'ಶಿರ್ಕ್' ಅಥವಾ ಬಹುದೇವವಿಶ್ವಾಸ ಎಂಬುದು 'ತೌಹೀದ್'ನ ವಿರೋಧ ಪದವಾಗಿದೆ. ಶಿರ್ಕ್ ಎಂದರೆ, ಅಲ್ಲಾಹನ ಅಸ್ತಿತ್ವ ಮತ್ತು ಗುಣಗಳಲ್ಲಿ ಇತರರನ್ನು ಸಹಭಾಗಿ ಗೊಳಿಸುವುದು. ಈ ವ್ಯಾಖ್ಯೆಯಿಂದ ಶಿರ್ಕ್ ಮೂಲಭೂತವಾಗಿ ಮೂರು ವಿಧವೆಂದು ತಿಳಿಯಬಹುದು -

1. شرك فى الذات ಅರ್ಥಾತ್ಅಲ್ಲಾಹನ ಅಸ್ತಿತ್ವದಲ್ಲಿರುವ ಶಿರ್ಕ್
2. شرك فى الصفات ಅರ್ಥಾತ್ ಅಲ್ಲಾಹನ ಗುಣಗಳಲ್ಲಿರುವ ಶಿರ್ಕ್.
3. شرك فى الحقوق ಅರ್ಥಾತ್ ಅಲ್ಲಾಹನ ಹಕ್ಕುಗಳಲ್ಲಿರುವ ಶಿರ್ಕ್.

ದೇವಾಸ್ತಿತ್ವದಲ್ಲಿ ಸಹಭಾಗಿತ್ವ

ನೈಜ ದೇವನ ಬದಲಾಗಿ ಜಗತ್ತಿನಲ್ಲಿರುವ ಯಾವುದಾದರೊಂದು ವಸ್ತು, ವ್ಯಕ್ತಿ ಅಥವಾ ಶಕ್ತಿಯನ್ನು ದೇವನೆಂದು ಪರಿಗಣಿಸುವುದು. ಇದು ಅಲ್ಲಾಹನ ಅಸ್ತಿತ್ವದಲ್ಲಿರುವ 'ಶಿರ್ಕ್' (شرك فى الذات) ಎಂಬುದರ ತಾತ್ಪರ್ಯ. ಹಾಗೆಯೇ ದೇವನಿಗೆ ತಂದೆ, ತಾಯಿ ಮತ್ತು ಮಕ್ಕಳಿದ್ದಾರೆಂಬ ಕಲ್ಪನೆಯೂ ಅಲ್ಲಾಹನ ಅಸ್ತಿತ್ವದಲ್ಲಿ ಸಹಭಾಗಿತ್ವವಾಗಿದೆ. ಏಸು (ಪ್ರವಾದಿ ಈಸಾ) ದೇವದೂತನೆಂಬ ಮುಸ್ಲಿಮರ ವಿಶ್ವಾಸಕ್ಕಿಂತ ಭಿನ್ನವಾಗಿ ಕ್ರೈಸ್ತರು ಅವರನ್ನು ದೇವನೆಂದೂ ದೇವಪುತ್ರನೆಂದೂ ನಂಬುತ್ತಾರೆ. ಏಸುವಿನ ತಾಯಿ ಮೇರಿ(ಮರ್ಯಮ್) ಯವರನ್ನು ದೇವನ ತಾಯಿಯೆಂದು ಅವರು ನಂಬುತ್ತಾರೆ. ಶ್ರೀಕೃಷ್ಣ, ಶ್ರೀರಾಮ, ಈಶ್ವರ, ಶ್ರೀವೆಂಕಟೇಶ, ಅಯ್ಯಪ್ಪ ಇತ್ಯಾದಿ ಅನೇಕ ಹೆಸರುಗಳುಳ್ಳವರನ್ನು ಹಿಂದುಗಳು ದೇವರೆಂದು ನಂಬುತ್ತಾರೆ. ಅವರ ಮೂರ್ತಿಗಳನ್ನು ಮಾಡಿ ಪೂಜಿಸುತ್ತಾರೆ. ದೇವಚರರು ಅಲ್ಲಾಹನ ಪುತ್ರಿಯರೆಂದು ಪ್ರವಾದಿಯವರ(ಸ) ಕಾಲದ ಅರಬರು ನಂಬುತ್ತಿದ್ದರು. ಈ ಎಲ್ಲ ನಂಬಿಕೆಗಳೂ ದೇವನ ಅಸ್ತಿತ್ವದಲ್ಲಿರುವ 'ಶಿರ್ಕ್'ನಲ್ಲಿ ಸೇರಿದೆ.

ದೇವ ಗುಣಗಳಲ್ಲಿ ಸಹಭಾಗಿತ್ವ

'ತೌಹೀದ್'ನ ವಿವರಣೆಯಲ್ಲಿ ಅಲ್ಲಾಹನ ಅನೇಕ ಗುಣಗಳಿವೆಯೆಂದು ನೀವು ಕಲಿತಿದ್ದೀರಿ. ಸರ್ವ ವೀಕ್ಷಕ, ಸರ್ವಶ್ರುತ, ಸರ್ವಶಕ್ತ, ಪ್ರತ್ಯಕ್ಷ-ಪರೋಕ್ಷಗಳನ್ನು ಬಲ್ಲವ, ಸೃಷ್ಟಿಕರ್ತ, ನಿಯಂತ್ರಕ ಇತ್ಯಾದಿ ಅನೇಕ ಗುಣ ವಿಶೇಷಗಳನ್ನು ಆತನು ಹೊಂದಿದ್ದಾನೆ. ಇವು ಕೇವಲ ಅಲ್ಲಾಹನ ವಿಶಿಷ್ಟ ಗುಣಗಳಾಗಿವೆ. ಈ ಗುಣಗಳನ್ನು ಯಾವುದಾದರೂ ಮಾನವನಿಗೆ ಹೋಲಿಸಿದರೆ ಅದು ಅಲ್ಲಾಹನ ಗುಣ ವಿಶೇಷಗಳಲ್ಲಿರುವ 'ಶಿರ್ಕ್' (**شرك فى الصفات**) ಆಗುತ್ತದೆ. ಉದಾಹರಣೆಗೆ ಭವಿಷ್ಯವನ್ನು ತಿಳಿಯಲಿಕ್ಕಾಗಿ ಅಥವಾ ಏನಾದರೂ ಕಳ್ಳತನವಾದರೆ ಅದನ್ನು ಯಾರು ತೆಗೆದಿದ್ದಾರೆಂಬುದನ್ನು ತಿಳಿಯಲಿಕ್ಕಾಗಿ ಯಾವನಾದರೂ ಜ್ಯೋತಿಷಿ ಅಥವಾ ಸಂತನನ್ನು ಅವಲಂಬಿಸಿದರೆ ಅಲ್ಲಾಹನ ಗುಣಗಳಲ್ಲಿ ಸಹಭಾಗಿ ಗೊಳಿಸಿದಂತಾಗುವುದು. ಏಕೆಂದರೆ, ಅಗೋಚರ ವಿಷಯಗಳನ್ನು ತಿಳಿಯುವ ಅಲ್ಲಾಹನ ವಿಶೇಷ ಗುಣವು ಕೆಲವು ಮಾನವರಲ್ಲಿಯೂ ಇದೆಯೆಂಬ ವಿಶ್ವಾಸ ಆ ಮೂಲಕ ವ್ಯಕ್ತವಾಗುತ್ತದೆ. ಪ್ರವಾದಿಗಳ ಬಗ್ಗೆಯೂ ಅಂತಹ ವಿಶ್ವಾಸವಿರಬಾರದು. ಪ್ರವಾದಿಯವರು(ಸ) ಮದೀನಕ್ಕೆ ವಲಸೆ ಬಂದಾಗ ಹಾಡಿದ ಸ್ವಾಗತ ಗೀತೆಯಲ್ಲಿ **وفينا نبى يعلم ما فى غد** ಮುಂದಿನ ವಿಷಯವನ್ನು ತಿಳಿಯುವ ಓರ್ವ ಪ್ರವಾದಿ ನಮ್ಮ ಜತೆಯಲ್ಲಿದ್ದಾರೆ ಎಂಬೊಂದು ಪಂಕ್ತಿಯಿತ್ತು. ಅದನ್ನು ಕೇಳಿ ಪ್ರವಾದಿಯವರು(ಸ) ಅದನ್ನು ತೀವ್ರವಾಗಿ ಆಕ್ಷೇಪಿಸಿ, ಭವಿಷ್ಯದ ವಿಷಯಗಳನ್ನು ಅಲ್ಲಾಹನ ವಿನಾ ಇತರ ಯಾರಿಗೂ ತಿಳಿಯುವ ಸಾಮರ್ಥ್ಯವಿಲ್ಲವೆಂದು ಅವರಿಗೆ ಕಲಿಸಿದರು.

ದೇವನ ಹಕ್ಕುಗಳಲ್ಲಿ ಸಹಭಾಗಿತ್ವ

ದೇವನ ಗುಣ ವಿಶೇಷಣಗಳ ಅನಿವಾರ್ಯ ಬೇಡಿಕೆಗಳಲ್ಲಿ ಅಥವಾ ಆ ಬಗ್ಗೆ ನಮ್ಮ ಕರ್ತವ್ಯಗಳಲ್ಲಿ ಸಹಭಾಗಿಗೊಳಿಸುವುದನ್ನು ಹಕ್ಕುಗಳಲ್ಲಿ ಸಹಭಾಗಿತ್ವ (**شرك فى الحقوق**) ಎನ್ನಲಾಗುತ್ತದೆ. ಅದರ ಬಗ್ಗೆ **شرك فى اللوازم**(ಅನಿವಾರ್ಯ ಬೇಡಿಕೆ ಗಳಲ್ಲಿರುವ ಶಿರ್ಕ್) ಅಥವಾ **شرك فى العبادات** (ಇಬಾದತ್‌ನಲ್ಲಿರುವ ಶಿರ್ಕ್) ಎಂದೂ

ಹೇಳಲಾಗುತ್ತದೆ. ಅಖಿಲ ಪ್ರಪಂಚದ ಸೃಷ್ಟಿಕರ್ತ ಎಂಬುದು ಅಲ್ಲಾಹನ ವಿಶೇಷಣವಾಗಿದೆ. ಜಗತ್ತಿನ ಸಂಪೂರ್ಣ ನಿಯಂತ್ರಣಾಧಿಕಾರ ಕೇವಲ ಅಲ್ಲಾಹನಿಗಾಗಿರುವುದು ಅದರ ಬೇಡಿಕೆಯಾಗಿದೆ. ಈ ಹಕ್ಕನ್ನು ಇತರರಿಗೆ ಒಪ್ಪಿಸಿದರೆ ಅದು 'ಶಿರ್ಕ್' ಆಗುತ್ತದೆ. ಏಕೆಂದರೆ, ನಿಯಂತ್ರಣಾಧಿಕಾರವು ಸೃಷ್ಟಿಸಿದವರದ್ದಾಗಿರಬೇಕೆಂಬುದು ಅದರ ಅನಿವಾರ್ಯ ಬೇಡಿಕೆಯಾಗಿದೆ. الا له الخلق والأمر (ತಿಳಿಯಿರಿ, ಸೃಷ್ಟಿ ಮತ್ತು ಶಾಸನಾಧಿಕಾರ ಕೇವಲ ಅಲ್ಲಾಹನಿಗೆ ಮಾತ್ರ) ಎಂದು ಪವಿತ್ರ ಕುರ್‌ಆನ್ ಸೂಚಿಸಿರುವುದು ಗಮನಾರ್ಹ. ಹಾಗಾದರೆ ಸೃಷ್ಟಿಕರ್ತನಾದ ಅಲ್ಲಾಹನ ಕಾನೂನುಗಳೇ ಆತನ ಭೂಮಿಯಲ್ಲಿಯೂ ಆತನ ದಾಸರಲ್ಲಿಯೂ ಜಾರಿಗೊಳ್ಳಬೇಕು. ಏಕೆಂದರೆ ಅದು ಅಖಿಲ ಲೋಕದ ನಿಯಂತ್ರಕ ಅಲ್ಲಾಹನೆಂಬುದರ ಅನಿವಾರ್ಯ ಬೇಡಿಕೆಯಾಗಿದೆ. ಆರಾಧನೆ ಮತ್ತು ಬೇಷರತ್ ದಾಸ್ಯ ಹಾಗೂ ಅನುಸರಣೆಯು ಕೇವಲ ಆತನ ಹಕ್ಕಾಗಿದೆ. ಅದು ಅಲ್ಲಾಹನನ್ನು ಸೃಷ್ಟಿಕರ್ತ ಮತ್ತು ನಿಯಂತ್ರಕನೆಂದು ಅಂಗೀಕರಿಸುವುದರಿಂದ ನಾವು ನಿರ್ವಹಿಸಬೇಕಾದ ಕರ್ತವ್ಯಗಳಾಗಿವೆ. ಒಟ್ಟಿನಲ್ಲಿ ಅಲ್ಲಾಹನ ಹೊರತು ಇತರರಿಗೆ ವಿಧೇಯರಾಗಿ ಬಾಳುವುದು, ಆತನ ವಿರುದ್ಧವಾಗಿ ಅನ್ಯರ ಆಜ್ಞೆಗಳನ್ನು ಅನುಸರಿಸಿ ಆತನನ್ನು ಪ್ರೀತಿಸುವಂತೆ ಇತರರನ್ನು ಪ್ರೀತಿಸುವುದು 'ಶಿರ್ಕ್' ಆಗಿದೆ.

'ಶಿರ್ಕ್'ನ ಬಗ್ಗೆ ಮೇಲೆ ಹೇಳಲಾದ ಮೂರು ಮೂಲ ವಿಧಗಳಲ್ಲದೇ ಶಿರ್ಕ್‌ನ ಮಾರ್ಗ ಅಥವಾ ರೂಪಗಳೆನಿಸುವ ಇತರ ಕೆಲವು ವಿಷಯಗಳೂ ಇವೆ. ಅಲ್ಲಾಹನ ಹೊರತು ಇತರರ ಮುಂದೆ ಪ್ರಣಾಮ, ಅವರ ಆಣೆ ಹಾಕುವುದು ಇತ್ಯಾದಿಗಳು ಅದರಲ್ಲಿ ಸೇರಿವೆ. ಅತ್ಯಂತ ಗೌರವ ಭಾವದಿಂದ ಒಬ್ಬರು ಇನ್ನೊಬ್ಬರ ಮುಂದೆ ತಲೆಬಾಗುತ್ತಾರೆ ಅಥವಾ ಅವರ ಹೆಸರಲ್ಲಿ ಆಣೆ ಹಾಕುತ್ತಾರೆ. ಇವು ಶಿರ್ಕ್‌ನ ಚಿಹ್ನೆಗಳಾಗಿದ್ದು ಅದರತ್ತ ಸಾಗಿಸುವ ಮಾರ್ಗಗಳಾಗಿವೆ. ಒಂದು ಕೆಟ್ಟ ವಿಷಯವನ್ನು ನಿಷೇಧಿಸುವಾಗ ಅದಕ್ಕೆ ಪ್ರೇರಕವಾಗುವ ವಿಷಯವನ್ನು ನಿಷೇಧಿಸುವುದು ಇಸ್ಲಾಮಿನ ಕಾರ್ಯ ನೀತಿಯಾಗಿದೆ. ಆದ್ದರಿಂದ ಶಿರ್ಕ್‌ಗೆ ಪ್ರೇರಕವಾಗುವ ಎಲ್ಲ ಮಾರ್ಗಗಳನ್ನೂ ಮುಚ್ಚಿ ಬಿಡಲು ಇಸ್ಲಾಮ್ ವಿಶೇಷ ಗಮನ ನೀಡಿದೆ. ಆ ಕಾರಣದಿಂದಲೇ ಗೋರಿಗಳನ್ನು ಎತ್ತರವಾಗಿ ಕಟ್ಟುವುದು, ಅಲ್ಲಿ ದೀಪ ಹಚ್ಚುವುದು ಮತ್ತು ಸ್ಮಾರಕ

ಮೂರ್ತಿಗಳನ್ನಿರಿಸುವುದನ್ನು ಇಸ್ಲಾಮ್ ನಿಷೇಧಿಸಿದೆ. ಬಯಕೆಗಳ ಈಡೇರಿಕೆಗಾಗಿ ಅಲ್ಲಾಹನೊಂದಿಗೆ ಪ್ರಾರ್ಥಿಸುವ ಬದಲಾಗಿ ಅಲಂಕರಿಸಿ ಕಟ್ಟಿದ ಔಲಿಯಾಗಳ ದರ್ಗಾಗಳಿಗೆ ಜನರು ಹೋಗುವುದು ಮತ್ತು ಅಲ್ಲಿ ವರ್ಷಂಪ್ರತಿ ಇತರ ಧರ್ಮೀಯರಂತೆ ಉತ್ಸವಗಳನ್ನು ಆಚರಿಸುವುದು ಸರ್ವ ಸಾಮಾನ್ಯವಾಗಿದೆ. ಹಾಗೆಯೇ ಮಹಾ ಪುರುಷರ ಸ್ಮರಣಾರ್ಥ ಸ್ಥಾಪಿಸಲಾದ ಮೂರ್ತಿಗಳ ಮುಂದೆ ಕ್ರಮೇಣ ಪೂಜೆ ಸಲ್ಲಿಸುವುದೂ ಕಂಡು ಬರುತ್ತದೆ. ಇವು ಘೋರ 'ಶಿರ್ಕ್'ನ ವರ್ಗಕ್ಕೆ ಸೇರಿದೆಯೆಂಬುದು ಸ್ಪಷ್ಟ.

ಮಾದರಿ ಪ್ರಶ್ನೆಗಳು

1. 'ಶಿರ್ಕ್'ನ ಮೂರು ಮೂಲ ವಿಧಗಳು ಯಾವುವು?
2. ಯೇಸು ದೇವಪುತ್ರನೆಂಬ ವಿಶ್ವಾಸ 'ಶಿರ್ಕ್'ನ ಯಾವ ವಿಧದಲ್ಲಿ ಸೇರಿದೆ?
3. شرك في الحقوق ಗಿರುವ ಇತರ 2 ಹೆಸರುಗಳು ಯಾವುವು?
4. ಶಿರ್ಕ್‌ಗೆ ಪ್ರೇರಕವಾಗುವ ಒಂದು ಉದಾಹರಣೆಯನ್ನು ತಿಳಿಸಿರಿ.

***

ಪಾಠ 7

'ಶಿರ್ಕ್'ನ ಉಗಮ ಮತ್ತು ಕಾರಣಗಳು

ಮಾನವ ಇತಿಹಾಸದ ಆರಂಭದಲ್ಲಿ ಏಕದೇವ ವಿಶ್ವಾಸವೇ ರೂಢಿಯಲ್ಲಿತ್ತು. ಆದಿಪಿತ ಆದಮ್‌ರು(ಅ) ತೌಹೀದ್‌ನ ಬುನಾದಿಯಿರುವ ಇಸ್ಲಾಮ್‌ನೊಂದಿಗೆ ಭೂಮಿಗೆ ಆಗಮಿಸಿದ್ದರೆಂದು ನೀವು ಕಲಿತಿರುವಿರಷ್ಟೆ. ಕ್ರಮೇಣ ಮಾನವರು ಶಿರ್ಕ್‌ನೆಡೆಗೆ ತಿರುಗಿದರು. ಪ್ರವಾದಿ ನೂಹ್‌ರ(ಅ) ಕಾಲಕ್ಕಿಂತ ಸ್ವಲ್ಪ ಮುಂಚೆ ಶಿರ್ಕ್‌ಗೆ ಪ್ರಚಾರ ದೊರೆಯಿತೆಂದು ತಿಳಿಯಲಾಗಿದೆ. ಪ್ರವಾದಿ ನೂಹ್‌ರು(ಅ) ತನ್ನ ಸಮುದಾಯಕ್ಕೆ 'ತೌಹೀದ್' ಬೋಧಿಸಿದಾಗ ಆ ಕಾಲದ ಸಮುದಾಯ ನಾಯಕರು ಹೀಗೆ ಹೇಳಿದರೆಂದು ಕುರ್‌ಆನ್ ದಾಖಲಿಸಿದೆ-

لا تذرنّ الهتكم ولا تذرن ودا ولا سواعا ولا يغوث ويعوق

ونسرا (نوح : ٢٢)

"ನೀವು ನಿಮ್ಮ ದೇವಂದಿರನ್ನು ತೊರೆಯಬಾರದು. ವದ್ದ್, ಸುವಾಅ್, ಯಗೂಸ್, ಯವೂಕ್‌ರನ್ನು ಸರ್ವಥಾ ನೀವು ಕೈ ಬಿಡಬಾರದು."

ವದ್ದ್, ಸುವಾಅ್, ಯಗೂಸ್, ಯವೂಕ್ ಮತ್ತು ನಸ್ರ್‌ಗಳು ಪ್ರವಾದಿ ನೂಹ್‌ರ(ಅ) ಜನಾಂಗವು ಆರಾಧಿಸುತ್ತಿದ್ದ ಮೂರ್ತಿಗಳ ಹೆಸರುಗಳಾಗಿವೆ. ಇವರೆಲ್ಲರೂ ಆ ಜನಾಂಗದ ಪೂರ್ವ ಕಾಲದ ಮಹಾಪುರುಷರೆಂದು ಸಹಾಬಿವರ್ಯರಾದ ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಹೇಳಿದ್ದಾರೆ. ಆ ಮಹಾ ಪುರುಷರು ಕುಳಿತುಕೊಳ್ಳುತ್ತಿದ್ದ ಸಭೆಗಳಲ್ಲಿ ಅವರ ಸ್ಮರಣೆಗಾಗಿ ಕ್ರಮೇಣ ವಿಗ್ರಹಗಳನ್ನು ಸ್ಥಾಪಿಸಿದರು. ಆ ಸ್ಥಾಪಕರು ಮರಣ ಹೊಂದಿದ ಬಳಿಕ ಅವರ ಮುಂದಿನ ಪೀಳಿಗೆಯವರು ಅದನ್ನು ಆರಾಧಿಸಲಾರಂಭಿಸಿದರು.

ಸಾಮಾನ್ಯವಾಗಿ ಹೀಗೆಯೇ ಎಲ್ಲ ಸಮುದಾಯಗಳಲ್ಲಿಯೂ 'ಶಿರ್ಕ್' ಸೇರಿಕೊಂಡಿದೆ. ಮಹಾ ಪುರುಷರೊಂದಿಗಿನ ಅಮಿತ ಪ್ರೀತ್ಯಾದರಗಳು ಕಾಲಕ್ರಮೇಣ

ಅವರನ್ನು ಪೂಜಾ ವಿಗ್ರಹಗಳಾಗಿ ಮಾಡಿತು. ಈ ಕಾರಣದಿಂದಲೇ ಕ್ರೈಸ್ತರು ಈಸಾರನ್ನು(ಅ) ದೇವಪುತ್ರನಾಗಿ ಮಾಡಿದರು. ಅಂತೆಯೇ ಕೆಲವು ಮುಸ್ಲಿಮರು ಶೇಖ್ ಮುಹ್‌ಯುದ್ದೀನ್, ಶೇಕ್ ರಿಫಾಯಿ ಮುಂತಾದವರನ್ನು ಕರೆದು ಪ್ರಾರ್ಥಿಸುತ್ತಾರೆ. ಕ್ರೈಸ್ತರನ್ನು ಅಭಿಸಂಬೋಧಿಸಿ ಕುರ್‌ಆನ್ ಹೀಗೆ ಹೇಳಿದೆ:

يا أهل الكتاب لا تغلوا فى دينكم ولا تقولوا على الله الا الحق انما المسيح عيسى ابن مريم رسول الله وكلمته ألقاها إلى مريم وروح منه(النساء: ١٧١)

"ಓ ಗ್ರಂಥದವರೇ, ನಿಮ್ಮ ಧರ್ಮದಲ್ಲಿ ನೀವು ಹದಮೀರಬೇಡಿರಿ. ಸತ್ಯದ ಹೊರತು ಇನ್ನೇನನ್ನೂ ಅಲ್ಲಾಹನ ಮೇಲೆ ಹೊರಿಸಬೇಡಿರಿ. ಮರ್ಯಮರ ಪುತ್ರ ಈಸಾ ಮಸೀಹರು ಅಲ್ಲಾಹನ ಸಂದೇಶವಾಹಕರಾಗಿದ್ದರೇ ವಿನಾ ಇನ್ನೇನೂ ಆಗಿರಲಿಲ್ಲ. ಅವರು ಅಲ್ಲಾಹನು ಮರ್ಯಮರ ಕಡೆಗೆ ಕಳುಹಿಸಿದ ಒಂದು ಫರಮಾನು (ಆಜ್ಞೆ) ಆಗಿದ್ದರು. ಮತ್ತು ಅಲ್ಲಾಹನ ಕಡೆಯಿಂದ (ಮರ್ಯಮರ ಗರ್ಭಾಶಯದಲ್ಲಿ ಶಿಶುವಿನ ರೂಪ ಧಾರಣಮಾಡಿದ) ಒಂದು ಆತ್ಮವಾಗಿದ್ದರು. (ಅನ್ನಿಸಾ: 171).

ಈ ಕುರ್‌ಆನ್ ವಾಕ್ಯವು ಪ್ರವಾದಿ ಈಸಾರೊಂದಿಗಿನ ಗೌರವಾದರಗಳು ಮಿತಿಮೀರಿ ಕ್ರೈಸ್ತರು ಆ ಪ್ರವಾದಿಯನ್ನು ದೇವ ಪುತ್ರನೆಂದು ಆರಾಧಿಸಲಾರಂಭಿಸಿದರೆಂದು ವಿಶದ ಪಡಿಸುತ್ತದೆ. ಪೂರ್ವ ಸಮುದಾಯಗಳ ಈ ತಪ್ಪು ಹಾದಿಯನ್ನು ನೋಡಿ ಪ್ರವಾದಿ ಮುಹಮ್ಮದ್‌ರು(ಸ) ತಮ್ಮ ಅನುಯಾಯಿಗಳಿಗೆ ಹೀಗೆಂದು ಬಲವಾಗಿ ಉಪದೇಶಿಸಿದ್ದರು-

لاتطرونى كما أطرت النصارى عيسى ابن مريم إنما أنا عبده فقولوا عبدالله ورسوله

"ಮರ್ಯಮರ ಪುತ್ರ ಈಸಾರನ್ನು ಕ್ರೈಸ್ತರು ಹೊಗಳಿದಂತೆ ನೀವು ನನ್ನನ್ನು ಮಿತಿಮೀರಿ ಹೊಗಳಬಾರದು. ನಾನು ಕೇವಲ ಅಲ್ಲಾಹನ ದಾಸನಾಗಿದ್ದೇನೆ. ಆದ್ದರಿಂದ ನನ್ನ ಕುರಿತು ಅಲ್ಲಾಹನ ದಾಸ ಮತ್ತು ದೂತನೆಂದು ಮಾತ್ರ ಹೇಳಿರಿ."

ಪ್ರವಾದಿ ಮುಹಮ್ಮದ್‌ರು(ಸ) ಅಂತ್ಯಪ್ರವಾದಿಯೆಂಬ ನೆಲೆಯಲ್ಲಿ ಎಲ್ಲ ಮಾನವರಿಗಿಂತಲೂ ಶ್ರೇಷ್ಠರೆಂದು ನಾವು ತಿಳಿದಿದ್ದೇವೆ. ಅಂತಹ ಪ್ರವಾದಿಯವರೇ, ನನ್ನನ್ನು ಅತಿಯಾಗಿ ಹೊಗಳುವ ಮೂಲಕ ಕೇವಲ ದೇವನಿಗೆ ಮಾತ್ರ ಸಲ್ಲುವ ಸ್ಥಾನಮಾನಗಳಿಗೆ ನನ್ನನ್ನು ಏರಿಸಬೇಡಿರೆಂದು ಎಚ್ಚರಿಕೆ ನೀಡಿರುತ್ತಾರೆ. ಸ್ವತಃ ಪ್ರವಾದಿಯವರೇ ನಿಷೇಧಿಸಿರುವ ಈ ಸ್ಥಾನವನ್ನು ಯಾರಾದರೂ ಶೇಖ್ ಅಥವಾ ಔಲಿಯಾಗಳಿಗೆ ನೀಡಬಾರದೆಂದು ಪ್ರತ್ಯೇಕ ಹೇಳಬೇಕಾಗಿಲ್ಲವಷ್ಟೆ.

ಅಲ್ಲಾಹನ ಬಗೆಗಿನ ತಪ್ಪು ಕಲ್ಪನೆಯು ಮಾನವನನ್ನು 'ಶಿರ್ಕ್'ಗೆ ಸಾಗಿಸುವ ಇನ್ನೊಂದು ಕಾರಣವಾಗಿದೆ. ದೇವನು ಜನಸಾಮಾನ್ಯರಿಗೆ ನಿಲುಕದ ಶಕ್ತಿಯೆಂದು ಕೆಲವರು ಭಾವಿಸಿದರು. ರಾಜರ ಅರಮನೆಗಳಿಗೆ ಜನಸಾಮಾನ್ಯರು ಪ್ರವೇಶಿಸಲು ಸಾಧ್ಯವಿಲ್ಲವಷ್ಟೆ. ಹಾಗೆಯೇ ದೇವನೊಡನೆ ತಮ್ಮ ಬೇಡಿಕೆ ಮತ್ತು ಅಹವಾಲುಗಳನ್ನು ನೇರವಾಗಿ ತಿಳಿಸಲು ನಮಗೆ ಸಾಧ್ಯವಿಲ್ಲವೆಂದು ಇವರು ಭಾವಿಸುತ್ತಾರೆ. ಅನಂತರ ಕಣ್ಮರೆಯಾದ ಮಹಾ ಪುರುಷರನ್ನು ಅಲ್ಲಾಹನ ಮಧ್ಯವರ್ತಿಯಾಗಿ ಅಂಗೀಕರಿಸುತ್ತಾರೆ. ಆಡಳಿತಗಾರರ ನಿಕಟವರ್ತಿಗಳನ್ನು ಪ್ರಸನ್ನಗೊಳಿಸಲಿಕ್ಕಾಗಿ ಕಾಣಿಕೆ ಸಲ್ಲಿಸುವಂತೆ ಈ ಮಧ್ಯವರ್ತಿಗಳಿಗೆ ಹರಕೆ ಉತ್ಸವಗಳನ್ನು ಜರಗಿಸಿ ತಮ್ಮ ಬೇಡಿಕೆ ಮತ್ತು ಅಹವಾಲುಗಳನ್ನು ಅವರ ಮುಂದೆ ತೋಡಿಕೊಳ್ಳುತ್ತಾರೆ. ವಸ್ತುಶಃ ಅಲ್ಲಾಹನ ಬಗ್ಗೆ ಇಂತಹ ಕಲ್ಪನೆಗೆ ಯಾವ ಆಧಾರವೂ ಇಲ್ಲ. ಈ ವಿಶ್ವಾಸವನ್ನು ಖಂಡಿಸಿ ಕುರ್‌ಆನ್ ಹೇಳಿರುವುದನ್ನು ನೋಡಿರಿ:

واذا سألك عبادى عنّى فإنى قريب أجيب دعــوة الداع اذا
دعان (البقرة: ١٨٦)

"ಓ ಪೈಗಂಬರರೇ, ನನ್ನ ದಾಸರು ನಿಮ್ಮೊಡನೆ ನನ್ನ ಬಗ್ಗೆ ಕೇಳಿದರೆ ನಾನು ಅವರಿಗೆ ನಿಕಟನಾಗಿದ್ದೇನೆಂದೂ ಪ್ರಾರ್ಥಿಸುವವನು ನನ್ನನ್ನು ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆಂದೂ ಅದಕ್ಕೆ ಉತ್ತರಿಸುತ್ತೇನೆಂದೂ ಅವರಿಗೆ ಹೇಳಿರಿ." (ಅಲ್ ಬಕರಃ :186)

ونحن أقرب اليه من حبل الوريد (ق : ١٦)

"ನಾವು ಮಾನವನಿಗೆ ಆತನ ಕಂಠನಾಡಿಗಿಂತಲೂ ಸಮೀಪವಿದ್ದೇವೆ." (ಕಾಫ್:16)

ಅಲ್ಲಾಹನೊಡನೆ ನೇರವಾಗಿ ಪ್ರಾರ್ಥಿಸಬೇಕು ಮತ್ತು ಆತನಿಗೆ ಮಧ್ಯವರ್ತಿಗಳ ಅಗತ್ಯವಿಲ್ಲವೆಂದು ಈ ಕುರ್‌ಆನ್ ವಾಕ್ಯಗಳಿಂದ ವ್ಯಕ್ತವಾಗುತ್ತದೆ. ಮುಸ್ಲಿಮರಲ್ಲಿಯೂ ಕೆಲವು ವಿಭಾಗಗಳು ಅಲ್ಲಾಹನ ಬದಲಾಗಿ ಶೈಕ್ ಮತ್ತು ಔಲಿಯಾರೊಡನೆ ಸಹಾಯ ಅಪೇಕ್ಷಿಸುತ್ತವೆ. ಇದಕ್ಕೆ توسّل 'ತವಸ್ಸುಲ್' ಎಂದು ಹೇಳಲಾಗುತ್ತಿದೆ. 'ತವಸ್ಸುಲ್' ತೌಹೀದಿಗೆ ವಿರುದ್ಧವಾಗಿದೆ. ಅಲ್ಲಾಹನ ಸಾಮಿಪ್ಯಕ್ಕಾಗಿ ನಾವು ಹೀಗೆ ಮಾಡುತ್ತಿರುವೆವೆಂದು ಅವರು ಸಮರ್ಥಿಸುತ್ತಾರೆ. ಪ್ರವಾದಿಯವರ(ಸ) ಕಾಲದಲ್ಲಿ ಅರೇಬಿಯದ ಬಹುದೇವ ವಿಶ್ವಾಸಿಗಳು ಹೀಗೆಯೇ ಸಮರ್ಥಿಸುತ್ತಿದ್ದರು. ಕುರ್‌ಆನ್‌ನಲ್ಲಿ ಅವರ ಈ ಸಮರ್ಥನೆಯನ್ನು ಉಲ್ಲೇಖಿಸಲಾಗಿದೆ.

ما نعبدهم الا ليقربونا الى الله زلفا

"ಅಲ್ಲಾಹನ ಸಾಮಿಪ್ಯ ಸಿದ್ಧಿಸಲಿಕ್ಕಾಗಿಯಲ್ಲದೇ ನಾವು ಅವರ ಇಬಾದತ್ ಮಾಡುವುದಿಲ್ಲ."

ಕೆಲವರು ಅಲ್ಲಾಹನಂತೆಯೇ ಗತ ಮಹಾ ಪುರುಷರನ್ನು ಕರೆದು ನೇರವಾಗಿ ಪ್ರಾರ್ಥಿಸುತ್ತಾರೆ. ಇದಕ್ಕೆ إستغاثة ಎನ್ನಲಾಗುತ್ತಿದೆ. 'ತವಸ್ಸುಲ್'ನಂತೆಯೇ 'ಇಸ್ತಿಗಾಸ'ವೂ ತೌಹೀದ್‌ಗೆ ತೀರಾ ವಿರುದ್ಧವಾಗಿದೆ.

ಉಪಕಾರ ಮಾಡಿದವರೊಡನೆ ಪ್ರೀತಿ ಮತ್ತು ಉಪದ್ರವಿಸುವವರ ಬಗ್ಗೆ ಭೀತಿಯು ಮಾನವ ಸಹಜವಾಗಿದೆ. ಇದು ಕೂಡಾ ಆತನನ್ನು 'ಶಿರ್ಕ್'ಗೆ ಪ್ರೇರೇಪಿಸುತ್ತದೆ. ಸಾಕುಪ್ರಾಣಿಯಾಗಿರುವ ದನವು ಮಾನವನಿಗೆ ಹಾಲು ಕೊಡುತ್ತದೆ. ಅದರ ಮೇಲಿನ

ಮಿತಿಮೀರಿದ ಪ್ರೀತಿಯಿಂದ ಕೆಲವರಿಗೆ ಅದು ಆರಾಧ್ಯವಸ್ತುವಾಯಿತು. ಪ್ರಾಯಶಃ ಈ ಕಾರಣದಿಂದಲೇ ನಮ್ಮ ದೇಶದಲ್ಲಿ ಕೆಲವರು ಗೋಪೂಜಕರಾದರು. ಸೂರ್ಯ, ಚಂದ್ರ, ನಕ್ಷತ್ರ, ಅಗ್ನಿ ಇತ್ಯಾದಿಗಳು ಮಾನವನಿಗೆ ಬಹಳ ಉಪಯುಕ್ತವಾದ ವಸ್ತುಗಳಾಗಿವೆ. ಅವು ಇಲ್ಲದಿದ್ದರೆ ಭೂಮಿಯಲ್ಲಿ ಮಾನವ ಜೀವನ ದುಸ್ತರವಾಗುವುದು. ಅವುಗಳಿಂದ ದೊರೆಯುವ ಪ್ರಯೋಜನಗಳನ್ನು ನೋಡಿದಾಗ ಕೆಲವರು ಅವುಗಳನ್ನು ದೇವರೆಂದು ತಪ್ಪು ತಿಳಿದುಕೊಂಡರು. ಹೀಗೆ ಸೂರ್ಯ ದೇವ, ಚಂದ್ರದೇವ, ಅಗ್ನಿ ದೇವರ ಉಗಮವಾಯಿತು. ಹಾವು, ಮಾನವನ ಮಟ್ಟಿಗೆ ಒಂದು ಹಾನಿಕಾರಕ ಜೀವಿಯಾಗಿದೆ. ಹಾವನ್ನು ಕಂಡರೆ ಎಲ್ಲರೂ ಹೆದರುತ್ತಾರೆ. ಈ ಭೀತಿಯಿಂದ ಕೆಲವು ವಿಭಾಗಗಳಲ್ಲಿ ನಾಗಪೂಜೆ ಹುಟ್ಟಿಕೊಂಡಿತು. ನಮ್ಮ ದೇಶದ ಅನೇಕ ಕಡೆಗಳಲ್ಲಿ ನಾಗರೂಪಗಳನ್ನು ಪೂಜಿಸಲಾಗುತ್ತಿದೆ. ಅವುಗಳ ಸಂಪ್ರೀತಿಗಾಗಿ ಹಾಲು ಮೊಟ್ಟೆಗಳನ್ನು ನೈವೇದ್ಯವಾಗಿ ಅರ್ಪಿಸಲಾಗುತ್ತದೆ. ಯಕ್ಷ (ಜಿನ್ನ್)ರಿಗೆ ಉಪಕಾರ ಅಥವಾ ಉಪದ್ರವಿಸುವ ಶಕ್ತಿಯಿದೆಯೆಂಬ ಮೂಢ ನಂಬಿಕೆಯಿಂದ ಯಕ್ಷ ಪೂಜೆ ಹುಟ್ಟಿಕೊಂಡಿದೆ.

ಹೀಗೆ ವಿವಿಧ ವಿಭಾಗಗಳಲ್ಲಿ ಇಂದು ರೂಢಿಯಲ್ಲಿರುವ 'ಶಿರ್ಕ್'ನ ರೂಪವನ್ನು ಪರಿಶೀಲಿಸಿದರೆ ಮಿತಿಮೀರಿದ ಪ್ರೀತ್ಯಾದರ, ಭೀತಿ, ಉಪಕಾರ ಸ್ಮರಣೆ, ಅಲ್ಲಾಹನ ಬಗ್ಗೆ ಸರಿಯಾದ ತಿಳುವಳಿಕೆಯ ಕೊರತೆ ಇತ್ಯಾದಿಗಳೇ ಅದರ ಮೂಲ ಕಾರಣವೆಂದು ವ್ಯಕ್ತವಾಗುತ್ತದೆ.

ಮಾದರಿ ಪ್ರಶ್ನೆಗಳು

1. 'ಶಿರ್ಕ್'ನ ಮೂಲ ಕಾರಣಗಳು ಯಾವುವು?
2. 'ಶಿರ್ಕ್' ಯಾವ ಕಾಲದಲ್ಲಿ ಪ್ರಥಮವಾಗಿ ಉದ್ಭವಿಸಿತು?
3. ವದ್ದ್, ಸುವಾಅ್, ಯಗೂಸ್, ಯವೂಕ್ ಎಂದರೆ ಯಾರು?

❋ ❋ ❋

ಪಾಠ 8

'ಶಿರ್ಕ್' ಅಂದು ಮತ್ತು ಇಂದು

ಅರೇಬಿಯದ ಮುಶ್ರಿಕರು (ಮಲಕ್) ದೇವಚರರನ್ನು ಅಲ್ಲಾಹನ ಪುತ್ರಿಯರೆಂದು ಸಂಕಲ್ಪಿಸಿ ಪೂಜಿಸುತ್ತಿದ್ದರು. ಪ್ರವಾದಿಯವರ ಕಾಲದ ಅರಬರು ಪೂಜಿಸುತ್ತಿದ್ದ ಲಾತ, ಉಝ್ಝಾ, ಮನಾತಗಳು ದೇವಚರರ ಮೂರ್ತಿಗಳಾಗಿದ್ದುವು. ಅವರು ದೇವಚರರನ್ನು ದೇವತೆಗಳೆಂದು ನಂಬಿದ್ದರೆಂದು ಈ ಮಹಿಳಾ ಹೆಸರುಗಳಿಂದ ವ್ಯಕ್ತವಾಗುತ್ತದೆ. ಭಾರತದ ಪುರಾಣಗಳಲ್ಲಿಯೂ ಇಂತಹ ದೇವಿ ಕಲ್ಪನೆ ವ್ಯಾಪಕವಾಗಿದೆ. ಪ್ರತಿಯೊಂದು ಅವಶ್ಯಕತೆಗೂ ಪ್ರತ್ಯೇಕ ದೇವಿಯರು ಮತ್ತು ಅವುಗಳ ವಿಗ್ರಹಗಳಿವೆ. ವಿದ್ಯೆಗೆ 'ಸರಸ್ವತಿ ದೇವಿ', ಸಂಪತ್ತಿಗೆ 'ಲಕ್ಷ್ಮೀ ದೇವಿ' ಹೀಗೆ ಪುರಾಣಗಳಲ್ಲಿರುವ ದೇವಿ ದೇವತೆಯರಿಗೆ ಲೆಕ್ಕ ಮಿತಿಯಿಲ್ಲ.

ದೇವಚರರ ಪೂಜೆಯಂತೆಯೇ ಯಕ್ಷ (ಜಿನ್ನ್)ರ ಪೂಜೆಯೂ ಮಕ್ಕಾ ಮುಶ್ರಿಕರಲ್ಲಿ ರೂಢಿಯಲ್ಲಿದ್ದ 'ಶಿರ್ಕ್'ನ ಇನ್ನೊಂದು ರೂಪವಾಗಿತ್ತು.

وجعلوا لله شركاء الجن (ಅವರು ಅಲ್ಲಾಹನಿಗೆ ಜಿನ್ನ್‌ಗಳನ್ನು ಸಹಭಾಗಿಗಳಾಗಿ ಮಾಡಿದರು) ಎಂದು ಕುರ್‌ಆನ್‌ನಲ್ಲಿ ಆ ಬಗ್ಗೆ ಹೇಳಲಾಗಿದೆ.

وأنه كان رجال من الانس يعوذون برجال من الجن (الجن : ٦)

"ಮಾನವರಲ್ಲಿ ಕೆಲವರು ಕೆಲವು ಜಿನ್ನ್‌ಗಳ ಅಭಯ ಯಾಚಿಸುತ್ತಿದ್ದರು" ಎಂಬ ಕುರ್‌ಆನ್ ವಾಕ್ಯವೂ ಅದನ್ನು ಸೂಚಿಸುತ್ತದೆ. ಜಿನ್ನ್‌ಗಳಿಗೆ ಅಗೋಚರ ವಿಷಯಗಳನ್ನು ತಿಳಿಯುವ ಸಾಮರ್ಥ್ಯವಿದೆಯೆಂಬ ಮೂಢನಂಬಿಕೆಯೂ ಜಿನ್ನ್ ಪೂಜೆಗೆ ಹೇತುವಾಗಿದೆ.ಇದರಿಂದ ಜೋತಿಷ್ಯ ಇತ್ಯಾದಿಗಳೂ ಹುಟ್ಟಿಕೊಂಡಿವೆ. ಕಾರ್ಯ ಸಾಧನೆಗಾಗಿ ಮತ್ತು ಅಗೋಚರ ವಿಷಯಗಳನ್ನು ತಿಳಿಯಲಿಕ್ಕಾಗಿ ಜಿನ್ನ್ ಸೇವೆ, ಭೂತ ಸೇವೆ ಇತ್ಯಾದಿ ಇಂದಿಗೂ ರೂಢಿಯಲ್ಲಿವೆ. ಜಿನ್ನ್ ಪೂಜೆಯಂತೆಯೇ ನಕ್ಷತ್ರ ಪೂಜೆಯೆಂಬ 'ಶಿರ್ಕ್' ಕೂಡಾ ಅರೇಬಿಯಾದಲ್ಲಿ ಸರ್ವ ವ್ಯಾಪಿಯಾಗಿತ್ತು. 'ಶಿಅ್‌ರಾ'

ಎಂಬ ನಕ್ಷತ್ರವು ಅವರ ವಿಶೇಷ ಆರಾಧ್ಯ ವಸ್ತುವಾಗಿತ್ತು. ನಕ್ಷತ್ರಗಳು ಮಾನವ ಜೀವನದ ಮೇಲೆ ಪ್ರಭಾವ ಬೀರುವುದೆಂದು ಅವರು ನಂಬಿದ್ದರು. ಈ ನಂಬಿಕೆ ಭಾರತದಲ್ಲಿಯೂ ವ್ಯಾಪಕವಾಗಿದೆ. ಜನ್ಮ-ನಕ್ಷತ್ರಗಳ ಆಧಾರದಲ್ಲಿ ಭವಿಷ್ಯ ಫಲ, ಜಾತಕ ಪರೀಕ್ಷೆ, ಮುಹೂರ್ತ ನಿರ್ಣಯ ಇತ್ಯಾದಿಗಳಿಗೆ ಆ ನಂಬಿಕೆಯೇ ಪ್ರೇರಕವಾಗಿದೆ.

ಪಿತೃ ಪೂಜೆಯು, ಅರಬರಲ್ಲಿ ರೂಢಿಯಲ್ಲಿದ್ದ ಇನ್ನೊಂದು 'ಶಿರ್ಕ್'. ತಮ್ಮ ಪೂರ್ವಜರ ವಿಗ್ರಹಗಳನ್ನು ಪೂಜಿಸುವ ಸಂಪ್ರದಾಯವನ್ನು ಅವರು ತೊರೆದಿರಲಿಲ್ಲ. ಅವರು ಪ್ರವಾದಿ ಇಬ್ರಾಹೀಮ್(ಅ) ಪ್ರವಾದಿ ಇಸ್ಮಾಈಲ್(ಅ) ಮುಂತಾದ ಪ್ರವಾದಿಗಳ ಮೂರ್ತಿಗಳನ್ನೂ ಕಅಬಾಲಯದಲ್ಲಿ ಪ್ರತಿಷ್ಠಾಪಿಸಿದ್ದರು.

ಆತ್ಮಪೂಜೆಯು 'ಶಿರ್ಕ್'ನ ಮತ್ತೊಂದು ರೂಪ. ಅಲ್ಲಾಹನ ನಿಯಮಗಳ ಬದಲಾಗಿ ಸ್ವಂತ ಇಚ್ಛೆಯ ನಿಯಮಗಳಂತೆ ಬಾಳುವುದನ್ನು ಆತ್ಮಪೂಜೆ ಎನ್ನಲಾಗುತ್ತದೆ. ಆರಾಧನೆಯೂ ಸೇರಿದಂತೆ ನಿಶ್ಶರ್ತ ಅನುಸರಣೆ ಮತ್ತು ಮಾನವ ಜೀವನಕ್ಕೆ ಅವಶ್ಯಕ ನಿಯಮಗಳನ್ನು ನಿರ್ಮಿಸುವ ಹಕ್ಕು ಕೇವಲ ಅಲ್ಲಾಹನಿಗೆಂದು ನಿಮಗೆ ಜ್ಞಾಪಕವಿದೆಯಷ್ಟೆ.

أرءيت من اتخذ إلـهه هويه (الفرقان : ٤٣)

"ಸ್ವೇಚ್ಛೆಯನ್ನು ತನ್ನ ದೇವನಾಗಿಸಿದಾತನನ್ನು ನೀನು ನೋಡಲಿಲ್ಲವೇ" ಎಂದು ಕುರ್‌ಆನ್ ಪ್ರಶ್ನಿಸಿದೆ. ಅರಬರಲ್ಲಿ ರೂಢಿಯಲ್ಲಿದ್ದ ಶಿರ್ಕ್‌ನ ರೂಪದಲ್ಲಿ ಆತ್ಮ ಪೂಜೆಯೂ ಸೇರಿದೆ. ಸಂಪತ್ತು, ಅಧಿಕಾರ, ಸಮೃದ್ಧಿ ಪ್ರಾಪ್ತವಾದಾಗ ಅವೆಲ್ಲವೂ ತನ್ನ ಬುದ್ಧಿವಂತಿಕೆ ಮತ್ತು ಸಾಮರ್ಥ್ಯದಿಂದ ದೊರೆಯಿತೆಂದು ಕೆಲವರು ಅಹಂಕಾರ ಪಡುತ್ತಾರೆ. ಇದು ಆತ್ಮಪೂಜೆಯೆಂಬ 'ಶಿರ್ಕ್'ನ ಭಾಗವೇ ಆಗಿದೆ. ಈ ಗರ್ವಿಷ್ಠ ಸ್ವಭಾವವನ್ನು ಕುರ್‌ಆನ್ ಅನೇಕ ಕಡೆಗಳಲ್ಲಿ ಉಗ್ರವಾಗಿ ಖಂಡಿಸಿದೆ. ಅಹಂಕಾರವು شرك خفي (ಪರೋಕ್ಷ'ಶಿರ್ಕ್') ಎಂದು ಪ್ರವಾದಿಯವರು(ಸ) ಹೇಳಿರುವುದನ್ನೂ ಇಲ್ಲಿ ಜ್ಞಾಪಿಸಬಹುದು. ನಕ್ಷತ್ರ ಪೂಜೆ, ಜಿನ್ನ್ ಪೂಜೆ, ಪಿತೃ ಪೂಜೆ, ಆತ್ಮ ಪೂಜೆ,

ಇತ್ಯಾದಿ ಶಿರ್ಕ್‌ನ ರೂಪಗಳು ಅರೇಬಿಯಾದ ಮುಶ್ರಿಕರಲ್ಲಿ ಆಚರಣೆಯಲ್ಲಿತ್ತೆಂದು ಈ ವಿವರಣೆಗಳಿಂದ ವ್ಯಕ್ತವಾಯಿತು.

ನಮ್ಮ ಕಾಲದ ಗ್ರಂಥದವರಲ್ಲಿಯೂ ವಿಶಿಷ್ಟ ರೀತಿಯ ಬಹುದೇವ ವಿಶ್ವಾಸವಿತ್ತು. ಕ್ರೈಸ್ತಪೂಜೆ ಮತ್ತು ಮೇರಿ ಪೂಜೆ ಮಾತ್ರವಲ್ಲದೇ ಶಿರ್ಕ್‌ನ ಇನ್ನೊಂದು ಪ್ರಧಾನ ರೂಪವಾಗಿರುವ ಪುರೋಹಿತ ಪೂಜೆಯೂ ಅವರಲ್ಲಿ ರೂಢಿಯಲ್ಲಿತ್ತು. ಅವರು ನಿಯಮ ನಿರ್ಮಿಸುವ ಹಕ್ಕನ್ನು ಅಲ್ಲಾಹನ ಬದಲಿಗೆ ಧರ್ಮ ಪುರೋಹಿತರಿಗೆ ನೀಡಿದ್ದರು. ಅವರ ಪುರೋಹಿತರು ಗ್ರಂಥಗಳ ನಿಯಮಗಳಲ್ಲಿ ಹೇರಳ ತಿದ್ದುಪಡಿಗಳನ್ನು ಮಾಡುತ್ತಿದ್ದರು. ಈ ಪುರೋಹಿತರು ತಮ್ಮಿಚ್ಛೆಯಂತೆ ಅನೇಕ ವಿಷಯಗಳನ್ನು ಜನರಿಗೆ 'ಹಲಾಲ್' ಮತ್ತು 'ಹರಾಮ್' ಗೊಳಿಸಿದ್ದರು. ಇದು ಅಲ್ಲಾಹನ ಹಕ್ಕುಗಳಲ್ಲಿ ಹಸ್ತಕ್ಷೇಪವೆಂಬುದು ಸ್ಪಷ್ಟವಷ್ಟೆ. ಪಾಪಗಳನ್ನು ಮನ್ನಿಸುವ ಹಕ್ಕನ್ನೂ ಅವರು ಪುರೋಹಿತರಿಗೆ ನೀಡಿದ್ದರು. ಇಂದಿಗೂ ಆ ಸ್ಥಿತಿ ಮುಂದುವರಿಯುತ್ತಿದೆ. ಕೆಥೋಲಿಕ್ ಕ್ರೈಸ್ತರು ರೋಮ್‌ನ ಪೋಪ್ ಮತ್ತು ಅವರ ಕೆಳಗಿನ ಬಿಷಪರಿಗೆ ದೈವಿಕ ಸ್ಥಾನವನ್ನು ನೀಡುತ್ತಿದ್ದಾರೆ.

ಮಾದರಿ ಪ್ರಶ್ನೆಗಳು

1. ಪ್ರವಾದಿಯವರ(ಸ) ಕಾಲದಲ್ಲಿ ಅರಬರಲ್ಲಿವ್ಯಾಪಿಸಿದ್ದ 'ಶಿರ್ಕ್'ನ ರೂಪಗಳು ಯಾವುವು?
2. ಅರಬರು ಆರಾಧಿಸುತ್ತಿದ್ದ ನಕ್ಷತ್ರದ ಹೆಸರೇನು?
3. ಗ್ರಂಥದವರಲ್ಲಿರುವ 'ಶಿರ್ಕ್'ನ ರೂಪಗಳು ಯಾವುವು?
4. 'ಆತ್ಮಪೂಜೆ' ಎಂದರೇನು?

❋ ❋ ❋

ಪಾಠ 9

'ಶಿರ್ಕ್'ನ ಭೀಕರತೆ

'ಶಿರ್ಕ್' ಅಲ್ಲಾಹನು ಎಂದೆಂದಿಗೂ ಕ್ಷಮಿಸದ ಪಾಪವಾಗಿದೆ. ಅಲ್ಲಾಹ ಹೇಳಿರುವುದನ್ನು ನೋಡಿರಿ:

إن الله لا يغفر ان يشرك به ويغفر ما دون ذلك لمن يشاء (النساء)

"ಅಲ್ಲಾಹ್ ತನ್ನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿ ಮಾಡುವುದನ್ನು ಮಾತ್ರ ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ಹೊರತು ಅವನು ಕ್ಷಮಿಸಲಿಚ್ಛಿಸುವ ಇತರ ಎಲ್ಲವನ್ನೂ ಕ್ಷಮಿಸುವನು.' (ಅನ್ನಿಸಾ:48) 'ಶಿರ್ಕ್'ನ ಭೀಕರತೆಯನ್ನು ಈ ಕುರ್‌ಆನ್ ವಾಕ್ಯದಿಂದ ತಿಳಿಯಬಹುದು.

إن الشرك لظلم عظيم 'ಶಿರ್ಕ್ ಘೋರ ಅಕ್ರಮ'ವೆಂದು ಕುರ್‌ಆನ್ ಇನ್ನೊಂದೆಡೆ ವರ್ಣಿಸಿದೆ. ಅಕ್ರಮವು, ಕ್ರಮ ಎಂಬ ಪದದ ವಿರೋಧ ಪದ ಅರ್ಥಾತ್ ಕ್ರಮವಿಲ್ಲದುದು. ಒಂದು ವಸ್ತುವನ್ನು ಅನ್ಯ ವಸ್ತುವಿನ ಸ್ಥಾನದಲ್ಲಿರಿಸುವುದನ್ನು ಅಕ್ರಮವೆನ್ನಲಾಗುತ್ತದೆ. 'ಶಿರ್ಕ್', ಪ್ರಪಂಚದ ಕ್ರಮಕ್ಕೂ ಮಾನವನ ಸಹಜ ಕ್ರಮಕ್ಕೂ ವಿರುದ್ಧವಾಗಿದೆ. ಒಂದು ದೇಶದಲ್ಲಿ ಸಮಾನ ಅಧಿಕಾರವಿರುವ ಇಬ್ಬರು ಆಡಳಿತಗಾರರಿದ್ದರೆ ಆ ದೇಶದ ಅವಸ್ಥೆ ಏನಾದೀತು? ಅಲ್ಲಿನ ಕ್ರಮವು ಸಂಪೂರ್ಣ ಅಸ್ತವ್ಯಸ್ತಗೊಂಡು ಕಲಸು ಮೇಲೋಗರವಾದೀತು. ಒಂದು ಶಾಲೆಗೆ ಇಬ್ಬರು ಮುಖ್ಯೋಪಾಧ್ಯಾಯರಿರುತ್ತಾರೆಯೇ? ಇಲ್ಲ. ಏಕೆಂದರೆ, ಶಾಲೆಯ ಸುಸೂತ್ರ ಕಾರ್ಯ ನಿರ್ವಹಣೆಗೆ ಒಬ್ಬನೇ ಮುಖ್ಯಸ್ಥನಿರಬೇಕು. ಈ ಪ್ರಪಂಚದ ಸ್ಥಿತಿಯೂ ಅಷ್ಟೆ. ಇಲ್ಲಿ ಒಂದಕ್ಕಿಂತ ಹೆಚ್ಚು ದೇವರಿದ್ದರೆ ಪ್ರಪಂಚವೇ ಉಳಿಯಲಾರದು. ಕುರ್‌ಆನ್ ಹೀಗೆ ಹೇಳಿದೆ: لو كان فيهما الهة الا الله لفسدتا (الأنبياء) "ಅವೆರಡರಲ್ಲಿಯೂ ಭೂಮಿ-ಆಕಾಶಗಳಲ್ಲಿ ಅಲ್ಲಾಹನ ಹೊರತು ಇತರ ದೇವರಿರುತ್ತಿದ್ದರೆ ಅವೆರಡು ನಾಶ

ನಾಗುತ್ತಿದ್ದುವು. وَمَن يُشْرِكْ بِاللَّهِ فَكَأَنَّمَا خَرَّ مِنَ السَّمَاءِ "ಯಾವನಾದರೂ ಅಲ್ಲಾಹನಿಗೆ ಸಹಭಾಗಿಗಳನ್ನು ನಿಶ್ಚಯಿಸಿದರೆ ಆತ ಆಕಾಶದಿಂದ ಬಿದ್ದವನಂತಾಗುವನು" ಎಂದು ಕುರ್‌ಆನ್ ಇನ್ನೊಂದೆಡೆ ಹೇಳಿದೆ. ಶಿರ್ಕ್ ಮಾಡುವಾತನು ತನ್ನ ಉನ್ನತ ಮಾನವ ಸ್ವಭಾವದಿಂದ ಜಾರಿಬೀಳುತ್ತಾನೆಂದರ್ಥ. ಇಲ್ಲಿ ಮಾನವನು ತನ್ನ ನೀಚತೆ ಮತ್ತು ಅಧಃಸ್ಥಿತಿಯನ್ನು ಬಹಿರಂಗ ಪಡಿಸುತ್ತಾನೆ. ಅಲ್ಲಾಹನ ಪ್ರತಿನಿಧಿಯೆಂಬ ಉನ್ನತ ಸ್ಥಾನ ಹೊಂದಿದವನು ತನ್ನಂತಹ ಅಥವಾ ತನಗಿಂತ ಕೆಳಗಿನವರನ್ನು ಒಡೆಯನಾಗಿಸುವುದಕ್ಕಿಂತ ದೊಡ್ಡ ನೀಚತೆ ಬೇರೇನಿದೆ?

ಶಿರ್ಕ್, ಮಾನವನು ಅಲ್ಲಾಹನೊಂದಿಗೆ ಮಾಡುವ ಮಹಾ ಅಕ್ರಮ ಮತ್ತು ಅನ್ಯಾಯವಾಗಿದೆ. ನಮ್ಮನ್ನು ಪೋಷಿಸಿ ಬೆಳೆಸುತ್ತಿರುವ ನಮ್ಮ ತಂದೆ ತಾಯಂದಿರಿಗೆ ನಾವು ಬಹಳಷ್ಟು ಋಣಿಗಳಾಗಿದ್ದೇವೆ. ಹೀಗಿರುತ್ತಾ, ಅವರಿಗೆ ಸೇವೆಯ ಅಗತ್ಯವಿರುವಾಗ ನಾವು ಬೇರೆಯವರ ಸೇವೆ ಮಾಡಿದರೆ ಅವರು ಕ್ಷಮಿಸಿಯಾರೇ?

ಶಿರ್ಕ್, ಮಾನವನ ಮಹಾಮೂರ್ಖತನ ಮತ್ತು ಅಜ್ಞಾನವೂ ಆಗಿದೆ. ಸ್ವಲ್ಪವಾದರೂ ವಿಚಾರ ಶಕ್ತಿಯಿರುವವರಿಗೆ ಈ ವಿಶ್ವಾಸ ಅಂಗೀಕರಿಸಲು ಸಾಧ್ಯವಿಲ್ಲ. ಒಬ್ಬರು ನಿಮಗೆ ಧಾರಾಳ ಆಹಾರ ಪದಾರ್ಥ ಮತ್ತು ಆಡಂಬರ ವಸ್ತುಗಳನ್ನು ನೀಡಿದರೆಂದು ಭಾವಿಸೋಣ, ಅವುಗಳನ್ನು ನೀಡಿದವರಿಗೆ ಕೃತಜ್ಞತೆ ಸಲ್ಲಿಸುವ ಬದಲಾಗಿ ಆ ವಸ್ತುಗಳ ಮುಂದೆ ತಲೆ ಬಾಗುವವನಿಗಿಂತ ದೊಡ್ಡ ಹುಂಬ ಯಾರಿರಬಹುದು? ಹಾಗೆಯೇ ನಮ್ಮ ಸುಗಮ ಜೀವನಕ್ಕಾಗಿ ಅಲ್ಲಾಹನು ಇಲ್ಲಿ ಅನೇಕ ವಸ್ತುಗಳನ್ನು ಸೃಷ್ಟಿಸಿದ್ದಾನೆ. ಅವುಗಳನ್ನು ಒದಗಿಸಿದ ಅಲ್ಲಾಹನ ಬದಲಿಗೆ ಆ ವಸ್ತುಗಳನ್ನೇ ಆರಾಧಿಸುವವನಿಗಿಂತ ದೊಡ್ಡ ಮೂರ್ಖ ಯಾರಿರಬಹುದು?

ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಗೌರವ ಪ್ರಾಪ್ತವಾಗಬೇಕಿದ್ದರೆ ನಾವು ಪ್ರತ್ಯಕ್ಷ ಮತ್ತು ಪರೋಕ್ಷವಾದ ಎಲ್ಲ ರೀತಿಯ ಶಿರ್ಕ್‌ಗಳಿಂದಲೂ ದೂರವಿರಬೇಕು. 'ಶಿರ್ಕ್' ಪಾಪವೆಂಬ ಕುರಿತು ಮುಸ್ಲಿಮರಲ್ಲಿ ಭಿನ್ನಾಭಿಪ್ರಾಯವಿಲ್ಲದಿದ್ದರೂ ಅಜ್ಞಾನದಿಂದಾಗಿ ನಾನಾ ರೀತಿಯ 'ಶಿರ್ಕ್' ಆಚಾರಗಳು ಅವರಲ್ಲಿ ರೂಢಿಯಲ್ಲಿದೆ. ಜಿನ್ನ್ ಪೂಜೆ, ಆತ್ಮ ಪೂಜೆ, ಗೋರಿ ಪೂಜೆ ಮುಂತಾದ ಮಕ್ಕಾ ಮುಶ್ರಿಕರಲ್ಲಿದ್ದ ಅನಾಚಾರಗಳು ಅವರಲ್ಲಿಯೂ ವ್ಯಾಪಿಸಿದೆ. ಅಲ್ಲಾಹನ

ನಿಯಮಗಳ ಬದಲಿಗೆ ಅನ್ಯ ನಿಯಮಗಳನ್ನು ಸ್ವೀಕರಿಸಲು ಅವರಿಗೆ ಯಾವ ಸಂಕೋಚವೂ ಇಲ್ಲ. ಭವಿಷ್ಯ ತಿಳಿಯಲಿಕ್ಕಾಗಿ ಅವರು ಸಂತರು ಮತ್ತು ಜಿನ್ನ್ ಸೇವಕರ ಬಳಿಗೆ ಹೋಗುತ್ತಾರೆ. ರೋಗ ಶಮನ ಮತ್ತು ಆಗ್ರಹ ಸಾಫಲ್ಯಕ್ಕಾಗಿ ಮಹಾ ಪುರುಷರೆನಿಸಿದವರ ಗೋರಿಗಳನ್ನು ಸಂದರ್ಶಿಸುತ್ತಾರೆ. ಅಲ್ಲಿನ ಪ್ರಸಾದ ಪಡೆದು ಅವರಿಗೆ ಹರಕೆ ಇತ್ಯಾದಿ ಸಲ್ಲಿಸುತ್ತಾರೆ. ಗತ ಮಹಾ ಪುರುಷರ ಹೆಸರಲ್ಲಿ ಬಲಿಯರ್ಪಿಸುತ್ತಾರೆ. ಅವರೊಡನೆ ಸಹಾಯ ಯಾಚಿಸುತ್ತಾರೆ. ಭವಿಷ್ಯ ತಿಳಿಯಲಿಕ್ಕಾಗಿ ಮತ್ತು ಸಂಕಷ್ಟಗಳ ನಿವಾರಣೆಗಾಗಿ ಸಂತರೆನಿಸಿದವರ ಬಳಿಗೆ ಹೋಗುತ್ತಾರೆ. ಮಾಟ, ಮಂತ್ರ, ತಾಯಿತ, ನೂಲು, ಅಂಜನ ನೋಡುವುದು ಇತ್ಯಾದಿ 'ಶಿರ್ಕ್' ಪರವಾದ ಅನೇಕ ಅನಾಚಾರಗಳನ್ನು ಮಾಡುತ್ತಾರೆ. ಅಲ್ಲಾಹನ ಸಾಮಿಪ್ಯ ಪಡೆಯಬೇಕಾದರೆ ಔಲಿಯಾಗಳ ಮಧ್ಯಸ್ಥಿಕೆ ಅವಶ್ಯಕವೆಂದು ನಂಬುತ್ತಾರೆ. ಹೀಗೆ ಪ್ರವಾದಿಯವರ(ಸ) ಕಾಲದಲ್ಲಿ ಅರಬರಲ್ಲಿದ್ದ ಮತ್ತು ಇತರ ಧರ್ಮೀಯರಲ್ಲಿ ರೂಢಿಯಲ್ಲಿರುವ 'ಶಿರ್ಕ್' ಆಚಾರಗಳು ಮುಸ್ಲಿಮರಲ್ಲಿಯೂ ನುಸುಳಿ ಕೊಂಡಿದೆ. 'ಶಿರ್ಕ್'ನ ಭೀಕರತೆಯನ್ನು ಮನಗಂಡಾತನು ಖಂಡಿತವಾಗಿಯೂ ಆ ನಾಶ ಕೂಪಕ್ಕೆ ಸರ್ವಥಾ ಧುಮುಕಲಾರನು.

ಮಾದರಿ ಪ್ರಶ್ನೆಗಳು

1. ಶಿರ್ಕ್, ಅಲ್ಲಾಹನು ಕ್ಷಮಿಸದ ಪಾಪವೆಂದು ತಿಳಿಸುವ ಕುರ್‌ಆನ್ ವಾಕ್ಯವನ್ನು ಹೇಳಿರಿ.
2. ಶಿರ್ಕನ್ನು ಮಹಾ ಅಕ್ರಮವೆಂದು ವರ್ಣಿಸಿರುವುದೇಕೆ?
3. ಇಂದು ಮುಸ್ಲಿಮರಲ್ಲಿ ನುಸುಳಿರುವ ಮೂರು 'ಶಿರ್ಕ್' ಆಚಾರಗಳನ್ನು ತಿಳಿಸಿರಿ.

❋ ❋ ❋